ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 4 ಜನವರಿ 25, 1981 ಬೆಲೆ : 50 ಪೈಸೆ

ಕೊಲೆಗಡುಕ ಸರಕಾರ

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ನ್ಯಾಯಯುತವಾದ ಮುಷ್ಕರವನ್ನು ಬೆಂಬಲಿಸಿ ಜನವರಿ 21ರಂದು ಬೆಂಗಳೂರು ಸಂಪೂರ್ಣ ಬಂದ್ ಆಯಿತು. ಸರ್ಕಾರ ಮತ್ತು ಆಳುವ ಪಕ್ಷದ ಪಿತೂರಿ, ಪ್ರಚೋದನೆಗಳಿಂದ ಅಲ್ಲಲ್ಲಿ ಸಣ್ಣಪುಟ್ಟ ಘರ್ಷಣೆಗಳಾದವು. ನಿರಪರಾಧಿ ಜನರ ಮೇಲೆ ವಿಮಾನ ಕಾರ್ಖಾನೆಯ ಸಮೀಪದ ಕೋನೆನ್ನ ಅಗ್ರಹಾರದಲ್ಲಿ ಗುಂಡಿನ ಸುರಿಮಳೆ ನಡೆಯಿತು. ಮೂವರ ಜೀವವನ್ನು ಬಲಿತೆಗೆದುಕೊಳ್ಳಲಾಯಿತು. ಅನೇಕ ಮಂದಿಗೆ ತೀವ್ರ ಗಾಯಗಳಾದವು.

ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ವಿದ್ಯಾರ್ಥಿಗಳು ರಸ್ತೆ ಸಾರಿಗೆ ಪ್ರಯಾಣ ದರಏರಿಕೆಯನ್ನು ವಿರೋಧಿಸಿ, ಕೋಲಾರ ವಿದ್ಯಾರ್ಥಿಗಳಿಗೆ ಸೌಹಾರ್ದವನ್ನು ತೋರಿಸಿ ಮತ್ತು ಇತರೆ ಬೇಡಿಕೆಗಳನ್ನು ಮುಂದಿಟ್ಟು ಪ್ರದರ್ಶನ ನಡೆಸಿದರು. 21ರಂದು ಚಿಂತಾಮಣಿಯಲ್ಲಿ ವಿದ್ಯಾರ್ಥಿ ಪ್ರದರ್ಶನಕಾರರ ಮೇಲೆ ಪೋಲೀಸರು ಗೋಲಿಬಾರು ನಡೆಸಿದರು. ಬೆಂಗಳೂರಿಗೆ ದೊರೆತ ವಾರ್ತೆಪ್ರಕಾರ ನಾಲ್ಕು ಮಂದಿ ಅಸು ನೀಗಿರುವರು. ಮೈಸೂರು, ಕೋಲಾರ, ಚನ್ನಪಟ್ಟಣಗಳಲ್ಲಿ ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜು ನಡೆಸಿದ ವರದಿ ಬಂದಿದೆ.

ಸಂಪಾದಕೀಯ

ನರಗುಂದದಿಂದ ಪ್ರಾರಂಭಗೊಂಡು ಚಿಂತಾಮಣಿ ತನಕ ಹಲವಾರು ಮಂದಿಯ ಜೀವವನ್ನು ಬಲಿತೆಗೆದುಕೊಂಡ ಕೊಲೆಗಡುಕ ಸರ್ಕಾರಕ್ಕೆ ಆಳುವ ಹಕ್ಕೇ ಇಲ್ಲ. ವಿದ್ಯಾರ್ಥಿ, ಕಾರ್ಮಿಕ, ರೈತ ಮತ್ತು ಇತರೇ ವಿಭಾಗದ ಜನತೆಯ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬದಲಾಗಿ, ಹೋರಾಟಗಳನ್ನೇ ದಮನಗೊಳಿಸುವ ಸರ್ಕಾರದ ನೀತಿ, ಪೋಲೀಸರನ್ನು ಛೂಬಿಟ್ಟು ಜೀವಗಳನ್ನು ಬಲಿತೆಗೆದುಕೊಳ್ಳುವ ಪೋಲೀಸ್ ರಾಜ್ಯಭಾರ-ಇವು ಖಂಡನೀಯ. ಸರ್ಕಾರವು ತನ್ನ ಧೋರಣೆಗಳನ್ನು ಬದಲಾಯಿಸಿಕೊಳ್ಳದಿದ್ದಲ್ಲಿ, ಕೊಲೆಗಡುಕ ನೀತಿಯನ್ನು ಕೈಬಿಡದಿದ್ದಲ್ಲಿ ಈಗ ನಡೆಯುತ್ತಿರುವ ವಿದ್ಯಾರ್ಥಿ ಚಳುವಳಿ, ಕಾರ್ಮಿಕರ ಹೋರಾಟ ಮತ್ತು ರೈತರ ಚಳುವಳಿ ಹಾಗೂ ಇತರೆ ವಿಭಾಗದ ಜನತೆಯ ಹೋರಾಟಗಳೆಲ್ಲಾ ಒಂದುಗೂಡಿ, ಜನತೆಯನ್ನು ಬಲಿತೆಗೆದುಕೊಳ್ಳುವ ಸರ್ಕಾರವನ್ನೆ ಬಲಿತೆಗೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ವಿದ್ಯಾರ್ಥಿ-ಕಾರ್ಮಿಕರ ನಡುವೆ ಕಹಿ ಪ್ರಸಂಗ ಬಂದು ಘರ್ಷಣೆಯಾದ ವರದಿ ಬಂದಿದ್ದು, ಹಾಗಾಗದಂತೆ ನೋಡಿಕೊಳ್ಳಲು ಎರಡು ವಿಭಾಗದವರೂ ಶ್ರಮವಹಿಸಬೇಕು. ವಿದ್ಯಾರ್ಥಿ ಮತ್ತು ಕಾರ್ಮಿಕರು ಒಂದಾಗಿ ಸರ್ಕಾರದ ತಪ್ಪುಧೋರಣೆ, ಬೆಲೆಏರಿಕೆಯಂತಹ ಸಮಸ್ಯೆ ಮತ್ತು ಸರ್ವಾಧಿಕಾರ ಕ್ರಮಗಳ ವಿರುದ್ಧ ಹೋರಾಡಬೇಕೇ ಹೊರತು, ತಮ್ಮತಮ್ಮಲ್ಲಿ ಘರ್ಷಣೆಗೆ ಅವಕಾಶ ಕೊಡಬಾರದು. ಸರ್ಕಾರದ ವಿಭಜಿಸಿ ಆಳುವ ನೀತಿಗೆ ಬಲಿಬೀಳಬಾರದು.

ಬೆಂಗಳೂರು ಬಂದ್ ಸಂಪೂರ್ಣ ಯಶಸ್ವಿ

ನರರಾಕ್ಷಸರ ಗುಂಡೇಟಿಗೆ ಮೂವರ ಬಲಿ

ಡಿಸೆಂಬರ್ 26ರಿಂದ ಮುಷ್ಕರ ನಿರತ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಬೆಂಬಲಾರ್ಥ ಸೌಹಾರ್ದ ಸಮಿತಿ ಕರೆಕೊಟ್ಟಿದ್ದ ಬೆಂಗಳೂರು ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದ್ದು ಬೆಂಗಳೂರು ಬಿಕೋ ಎನ್ನುತ್ತಿತ್ತು. ಸಾರಿಗೆ, ಅಂಗಡಿಗಳು, ಥಿಯೇಟರುಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದ್ದವು.

ಬೆಂಗಳೂರು ನಗರದಲ್ಲಿ ಮಾತ್ರವಲ್ಲದೇ ರಾಷ್ಟ್ರಾದ್ಯಂತ ಒಂದೂವರೆ ಲಕ್ಷ ಕಾರ್ಮಿಕರ ನ್ಯಾಯಬದ್ಧ ಹೋರಾಟಕ್ಕೆ ಪರಿಹಾರ ತೋರದೆ, ನಿರ್ಲಕ್ಷ ಭಾವದಿಂದಿರುವ ಕೇಂದ್ರ ಸರ್ಕಾರದ ನಿಲುವೆ ಖಂಡನೀಯ. ಉತ್ಪನ್ನವಿಲ್ಲದೆ ದಿನವೊಂದಕ್ಕೆ 1.5 ಕೋಟಿರೂ.ಗಳಂತೆ ನಷ್ಟ ಅನುಭವಿಸುತ್ತಿರುವ ಈ ಕೈಗಾರಿಕಾ ವಲಯ ಕ್ಷೇತ್ರದಲ್ಲಿ ಈಗಾಗಲೇ ಕೋಟ್ಯಾಂತರ ರೂ.ಗಳು ನಷ್ಟವಾಗಿವೆ. ಕಾರ್ಮಿಕರ ಬೇಡಿಕೆ ಇರುವುದು ಕೇವಲ 6 ಕೋಟಿ ಮಾತ್ರ. ಇಷ್ಟು ದಿನಗಳ ಕಾಲ ಶಾಂತಯುತವಾಗಿ ನಡೆಯುತ್ತಿರುವ ಹೋರಾಟವನ್ನು ಗುಂಡೇಟಿನಿಂದ ಹತ್ತಿಕ್ಕುವ ಯತ್ನ ನಡೆಯುತ್ತಿದೆ.

ಎಚ್.ಎ.ಎಲ್. ಪ್ರದೇಶದಲ್ಲಿ ಗುಂಡೂರಾಯರ ಭಟರು ಅತ್ಯಂತ ಅಮಾನುಷವಾಗಿ ವರ್ತಿಸಿದ್ದಾರೆ. ಎಚ್.ಎ.ಎಲ್. ಕಾಲೋನಿಗಳಲ್ಲಿ ಮನೆಮನೆಗೆ ನುಗ್ಗಿ ಹೆಂಗಸರು ಮಕ್ಕಳೆನ್ನದೇ ನಿರ್ದಯತೆಯಿಂದ ಥಳಿಸಿದ್ದಾರೆ. ಕೈಗೆ ಸಿಕ್ಕಿದವರನ್ನು ಬಂದೂಕಿನ ಹಿಂಬದಿಯಿಂದ ಚಚ್ಚಿದ್ದಾರೆ. ಆಕ್ರೋಷಗೊಂಡ ಜನತೆ ಪೋಲೀಸ್ ಅಮಾನುಷ ಕೃತ್ಯಗಳನ್ನು ಪ್ರತಿಭಟಿಸಲು ಸಿದ್ಧರಾದಾಗ ಗೋಲಿಬಾರ್ ಮಾಡಲಾಗಿದೆ. ಗೋಲಿಬಾರ್‌ನಿಂದಾಗಿ ಮೂವರು ನಿಧನರಾಗಿದ್ದಾರೆ. ನಿಧನರಾದವರಲ್ಲಿ ಎಚ್.ಎ.ಎಲ್.ನ ಇಬ್ಬರು ಕಾರ್ಮಿಕರು (ಶ್ರೀ ಸುಂದರರಾಜ್ ಮತ್ತು ಶ್ರೀ ಶ್ರೀರಾಂ) ಮತ್ತು ಒಬ್ಬ ಡಾಕ್ಟರು (ಡಾ॥ ಶ್ರೀನಿವಾಸ) ಸೇರಿದ್ದಾರೆ. ಎಚ್.ಎ.ಎಲ್.ನ ಇನ್ನೊಂದು ಕಡೆ (ಮುರುಗೇಶ್‌ಪಾಳ್ಯ) ನಡೆದ ಗೋಲಿಬಾರ್‌ನಿಂದಾಗಿ ಅನೇಕರು ಗಾಯಗೊಂಡಿದ್ದಾರೆ. ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಶಾಂತಯುತ ಮುಷ್ಕರ ನಡೆಸುತ್ತಿದ್ದ ಕಾರ್ಮಿಕರಿಗೆ ಗುಂಡೂರಾವ್ ಸರ್ಕಾರದ ಬಳುವಳಿ ಇದಾಗಿದೆ. ಕಾನೂನು ರಕ್ಷಣೆಯ ಹೊಣೆಹೊತ್ತ ಪೋಲೀಸರು ಕಾರ್ಮಿಕರ ಮೇಲೆ ಕಲ್ಲು ತೂರುತ್ತಿದ್ದ ವರ್ತನೆಯಂತು ಹೇಯವಾದದ್ದು. ಪೋಲೀಸರು ತೂರಿದ ಕಲ್ಲುಗಳಿಂದ ಪತ್ರಿಕಾ ವರದಿಗಾರರಿಗೆ, ಛಾಯಾಗ್ರಾಹಕರಿಗೆ ಪೆಟ್ಟು ಬಿದ್ದಿದೆ.

(ಕಡೇ ಪುಟ ನೋಡಿ)

ಭಾರಿ ಸ್ವಾಗತ ಬೆಂಬಲಗಳೊಂದಿಗೆ ಮುನ್ನಡೆಯುತ್ತಿರುವ ರೈತರ ಜಾಥಾ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್(ಯು) ಮತ್ತು ಲೋಕದಳ ಪಕ್ಷಗಳು ರಚಿಸಿರುವ "ರೈತ-ಕಾರ್ಮಿಕ ಹೋರಾಟ ಸಮಿತಿ"ಯ ನೇತೃತ್ವದಲ್ಲಿ ಜನವರಿ 16ರಂದು ಮಧ್ಯಾಹ್ನದ ಮೇಲೆ 2 ಗಂಟೆಗೆ ಸರಿಯಾಗಿ ನರಗುಂದದಿಂದ ಬೆಂಗಳೂರಿಗೆ ರೈತರ ಜಾಥಾವು ಸಂಭ್ರಮದ ಬೀಳ್ಕೊಡುವಿಕೆಯೊಂದಿಗೆ ಹೊರಟಿತು. ಹುತಾತ್ಮರ ಜ್ಯೋತಿಯೊಂದಿಗೆ ಹೊರಟ ರೈತರ ಜಾಥಾವು 305 ಮೈಲಿ ದೂರವನ್ನು ಕಾಲ್ನಡಿಗೆಯಲ್ಲಿ ಅತಿಕ್ರಮಿಸಿ ಫೆಬ್ರುವರಿ 5ರಂದು ಬೆಳಿಗ್ಗೆ ಬೆಂಗಳೂರು ನಗರವನ್ನು ಪ್ರವೇಶಿಸಲಿದೆ.

ಮಧ್ಯಾಹ್ನದ ಉರಿಯುವ ಬಿಸಿಲನ್ನೂ ಲೆಕ್ಕಿಸದೆ ನರಗುಂದ ತಾಲೂಕು ಕಛೇರಿ ಎದುರು ನೆರೆದಿದ್ದ ಸುಮಾರು ಐದು ಸಹಸ್ರ ಮಂದಿ ರೈತ ಮತ್ತು ಕೂಲಿಗಾರರನ್ನು ಉದ್ದೇಶಿಸಿ ಉದ್ಘಾಟನಾ ಭಾಷಣವನ್ನು ಮಾಡಿದ ಶ್ರೀ ದೇವರಾಜ ಅರಸು ಅವರು ನಮ್ಮ ಹೋರಾಟವೆಂದರೆ ಬಡಜನರಿಗೆ, ಜನಸಾಮಾನ್ಯರಿಗಾಗಿ ನಡೆಯುವ ಹೋರಾಟ ಎಂದು ಘೋಷಿಸಿದರು. ಯೋಜಿತ ರೈತಜಾಥಾವನ್ನು ಯಶಸ್ವಿಯಾಗದಂತೆ ಮಾಡಲು ಸರ್ಕಾರ ಮತ್ತು ಕೆಲವು ರಾಜಕೀಯ ಮುಖಂಡರು ನಡೆಸಿದ ಪಿತೂರಿಯನ್ನು ಅವರು ಖಂಡಿಸಿದರು. ರೈತ-ಕಾರ್ಮಿಕ ಹೋರಾಟ ಸಮಿತಿಯ ಸಂಚಾಲಕ ಶ್ರೀ ಡಿ. ಬಿ.ಚಂದ್ರೇಗೌಡ, ಸಹ ಸಂಚಾಲಕರುಗಳಾದ ಕಾಂ. ಎಂ. ಕೆ. ಭಟ್ ಮತ್ತು ಕಾಂ. ಬಿ. ವಿ. ಕಕ್ಕಿಲ್ಲಾಯ, ಮಲಪ್ರಭಾ ರೈತ ಸಮನ್ವಯ ಸಮಿತಿಯ ಮುಂದಾಳುಗಳಾದ ಕಾಂ. ವಿ. ಎನ್. ಹಳಕಟ್ಟಿ, ನೀಲಕಂಠ ಅಸೂಟಿ, ಕಾರ್ಮಿಕ ಮುಂದಾಳು ಮುಧೋಳ ಮೊದಲಾದವರೂ ಭಾಷಣ ಮಾಡಿದರು.

ಬೆಳಿಗ್ಗೆ 10 ಗಂಟೆಯ ಹೊತ್ತಿಗೆ ಭಯದ ವಾತಾವರಣ ಮತ್ತು ನಿರ್ಜನವಾಗಿ ಕಂಡುಬರುತ್ತಿದ್ದ ನರಗುಂದದಲ್ಲಿ ಗಿರಣಿಕಾರ್ಮಿಕರು, ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರೂ ಸೇರಿ ಮೆರವಣಿಗೆ ಬರುತ್ತಿದ್ದಂತೆಯೇ ಜೀವಕಳೆ ತುಂಬಿತು. ಮಧ್ಯಾಹ್ನ 12 ಕ್ಕಾಗುವಾಗ ಭಾರಿ ಜನಸಮೂಹವು ಸಭಾಜಾಗದಲ್ಲಿ ನೆರೆಯಿತು. ಕಾಂ. ಹಳಕಟ್ಟಿ, ಎನ್. ಕೆ. ಉಪಾಧ್ಯಾಯ, ಜಗನ್ನಾಥ ಮೊದಲಾದವರು ಮನೆಮನೆಗೆ ಹೋಗಿ ಧೈರ್ಯವನ್ನು ತುಂಬುವ ಕೆಲಸವನ್ನು ಮಾಡಿದ್ದರು. ತಲೆಗೆ ರುಮಾಲನ್ನು ಸುತ್ತಿಕೊಂಡಿದ್ದ ಶ್ರೀ ಅರಸು ಅವರು ಮತ್ತಿತರ ನೆರೆದಿದ್ದ ಮುಂದಾಳುಗಳೊಡಗೂಡಿ ಸ್ವಲ್ಪ ದೂರ ಜಾಥಾದೊಂದಿಗೆ ನಡೆದರು.

16ರ ರಾತ್ರಿ ನವಲಗುಂದದಲ್ಲಿ ವಿರಮಿಸಿಕೊಂಡ ಮೇಲೆ 17ರಂದು ಬೆಳಿಗ್ಗೆ ಹೊರಟ ಜಾಥಾವು ಯಮನೂರನ್ನು ಹಾದು, ಅಲ್ಲಿ ಮಧ್ಯಾಹ್ನ ವಿರಮಿಸಿ, ಸಂಜೆ ಹೆಬ್ಬೂರನ್ನು ತಲಪಿತು. ಭಾರೀ ಪ್ರಮಾಣದ ಸ್ವಾಗತ, ಮೆರವಣಿಗೆ ಆದಮೇಲೆ ಹೆಬ್ಬೂರಿನಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಶ್ರೀ ಚಂದ್ರೇಗೌಡ, ಎಂ. ಕೆ. ಭಟ್, ಕಕ್ಕಿಲ್ಲಾಯ ಮತ್ತಿತರರು ಮಾತನಾಡಿದರು. 18ರ ಬೆಳಿಗ್ಗೆ ಹೆಬ್ಬೂರಿನಿಂದ ಹೊರಟ ಜಾಥಾವು ಮಧ್ಯದ ಹಳ್ಳಿಯೊಂದರಲ್ಲಿ ವಿರಮಿಸಿ, ಸಂಜೆ 6ಕ್ಕೆ ಹುಬ್ಬಳ್ಳಿ ನಗರವನ್ನು ಪ್ರವೇಶಿಸಿತು.

ಹುಬ್ಬಳ್ಳಿ ನಗರದ ಹೊರವಲಯದ ಕೇಶವಪುರದಲ್ಲಿ ದೊಡ್ಡ ಪ್ರಮಾಣದಲ್ಲಿ ಸೇರಿದ್ದ ಕಾರ್ಮಿಕರು, ಬೇರೆಬೇರೆ ವಿಭಾಗದ ನೌಕರರು, ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳೆಯರಿಂದ ಅದ್ದೂರಿಯ ವಿರೋಚಿತ ಸ್ವಾಗತ ದೊರೆಯಿತು. ನಗರದಲ್ಲೆಲ್ಲಾ ಸುತ್ತಾಡಿ, ಸಭೆಯು ನಡೆಯುವ ಜಾಗಕ್ಕೆ ಬರುತ್ತಿರುವಾಗ ದಾರಿಯ ಇಕ್ಕೆಲಗಳಲ್ಲೂ ಕಿಕ್ಕಿರಿದು ಸೇರಿದ್ದ ಜನತೆಯಿಂದ ಸ್ವಾಗತ ದೊರೆಯಿತು. ನಗರದಲ್ಲಿ ಜಾಥಾವು ಹೋಗುತ್ತಿದ್ದಂತೆಯೇ ಶ್ರೀ ಜಾರ್ಜ್‌ಫರ್ನಾಂಡೀಸ್ ಅವರು ಜಾಥಾವನ್ನು ಸೇರಿಕೊಂಡರು. ಜಾಥಾದ ಮುಂಭಾಗದಲ್ಲಿದ್ದವರ ಮೇಲೆ ಹೂವಿನ ಹಾರಗಳ ಸುರಿಮಳೆಯೇ ಆಯಿತು. ಮುಂದೆ ಜರುಗಿದ ಭಾರಿ ಬಹಿರಂಗ ಸಭೆಯ ಅಧ್ಯಕ್ಷ ಸ್ಥಾನವನ್ನು ಕಾಂ. ಜಿ.ಜಿ. ಮುಧೋಳ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಜಾರ್ಜ್ ಫರ್ನಾಂಡೀಸ್ ಅವರು ಸರ್ಕಾರವು

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ರಾಯಚೂರು :

ಹಾಡು ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಹಳ್ಳಿಗಳಲ್ಲಿ ಹಳ್ಳಿಗರ ಆಡುಭಾಷೆಯಲ್ಲಿಯೇ ಮಹಿಳೆಯರ ಸಮಸ್ಯೆಗಳನ್ನು ಎತ್ತಿತೋರಿಸುತ್ತಾ, ಅವುಗಳಿಗೆ ಕಾರಣ ಪರಿಹಾರ ಕಂಡುಕೊಳ್ಳುವಂತೆ ಪ್ರೇರೇಪಿಸಿ, ವೈಜ್ಞಾನಿಕ ದೃಷ್ಟಿಕೋನ ಬೆಳೆಯುವಂತೆ ಮಾಡಲು ಯತ್ನಿಸಲು 27-12-80ರಂದು ರಾಯಚೂರು ಪಕ್ಕದ ರಾಮಸಮುದ್ರ ಎಂಬ ಹಳ್ಳಿಯಲ್ಲಿ ರಾಯಚೂರಿನ ಪ್ರಗತಿಪರ ಮಹಿಳಾ ಸಂಘವು "ಮಥುರಾ ಪ್ರಕರಣ" ಎಂಬ ನಾಟಕ ಪ್ರದರ್ಶನ ನೀಡಿತು. ಪಾಲ್ಗೊಂಡಿದ್ದ ಜನರನ್ನು ಉದ್ದೇಶಿಸಿ ಶ್ಯಾಮಲ, ಸುಲೋಚನ ಮುಂತಾದವರು ಮಾತನಾಡಿದರು.

ಕುಂದಾಪುರ :

ದ. ಕ. ಜಿಲ್ಲೆಯ ಕುಂದಾಪುರದಲ್ಲಿ ತಾ. 30-12-80ರಂದು ಎಸ್.ಎಫ್.ಐ.ನ 10ನೇ ವಾರ್ಷಿಕೋತ್ಸವ ಆಚರಿಸಲಾಯಿತು. ಆ ದಿನ ಸಂಜೆ ಸ್ಥಳೀಯ ನೆಹರೂ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಸಭೆಯ ಅಧ್ಯಕ್ಷತೆಯನ್ನು ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರಾದ ಶ್ರೀ ಕೋಟ ರಾಮಚಂದ್ರ ಉಡುಪರು ವಹಿಸಿದ್ದರು. ಡಾ. ನಾಗರಾಜ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಆರಂಭದಲ್ಲಿ ದ.ಕ. ಜಿಲ್ಲಾ ಕಾರ್ಯದರ್ಶಿ ಕಾಂ. ಉಮೇಶ್‌ಭಂಡಾರಿ ಧ್ವಜಾರೋಹಣ ಮಾಡಿದರು. ಕಾಂ. ಆರ್. ಜಯಕುಮಾರ್ ಸ್ಥಳೀಯ ಬೆಳವಣಿಗೆಯ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಕುಂದಾಪುರ 'ಸಮುದಾಯ' ತಂಡದವರು "ಬೆಳೆದವರು" ನಾಟಕ ಪ್ರದರ್ಶಿಸಿದರು. ಈ ಕಾರ್ಯಕ್ರಮದ ಅಂಗವಾಗಿ ತಾಲ್ಲೂಕು ಮಟ್ಟದಲ್ಲಿ ವಿದ್ಯಾರ್ಥಿಗಳಿಗಾಗಿ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಬೆಂಗಳೂರು :

ವಿನಾಕಾರಣವಾಗಿ ಅನೇಕ ವರ್ಷಗಳಿಂದ ಕೆಲಸಮಾಡುತ್ತಿದ್ದ ಕಾರ್ಮಿಕನನ್ನು ಕೆಲಸದಿಂದ ತೆಗೆದಿರುವುದನ್ನು ಪ್ರತಿಭಟಿಸಿ ಬೆಂಗಳೂರು ಜಯರಾಂದಾಸ್ ಉದ್ಯೋಗಿ ಫ್ಯಾಕ್ಟರಿಯ 400 ಜನ ಕಾರ್ಮಿಕರು 31-12-80ರಿಂದ ಮುಷ್ಕರ ಹೂಡಿದ್ದಾರೆ. ಸಂಧಾನಕ್ಕೆ ಬರುವ ಬದಲು ಸಂಘದ ಪದಾಧಿಕಾರಿಗಳನ್ನೇ ಕೆಲಸದಿಂದ ಅಮಾನತ್ತುಮಾಡಿ ಇನ್ನೂ ವರೆಗೂ ನವೆಂಬರ್‌ನ ಸಂಬಳಕೊಟ್ಟಿಲ್ಲ. ಕಾರ್ಮಿಕ ಅಧಿಕಾರಿಗಳು ಕಚೇರಿಯಲ್ಲಿಯೇ ಸಭೆಗೆ ಕರೆದರೂ ಹಾಜರಾಗುತ್ತಿಲ್ಲ. ಮಾಲೀಕರ ಕಾರ್ಮಿಕವಿರೋಧಿ ನೀತಿಯ ವಿರುದ್ಧ ನಡೆದಿರುವ ಹೋರಾಟಕ್ಕೆ ಸಹಕಾರ ನೀಡಬೇಕೆಂದು ಜಯರಾಮ್‌ದಾಸ್ ಉದ್ಯೋಗ್‌ನ ಕಾರ್ಮಿಕಸಂಘದ ಪದಾಧಿಕಾರಿಗಳು ವಿನಂತಿಸಿಕೊಂಡಿದ್ದಾರೆ.

ಬೆಂಗಳೂರು ಹತ್ತಿರದ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಎಸ್ಟೇಟ್‌ನ ಕಂಟ್ರೋಲ್ ಇಕ್ವಿಪ್‌ಮೆಂಟ್ ಎಂಬ ಫ್ಯಾಕ್ಟರಿಯ ಕಾರ್ಮಿಕರು 5-1-81ರಿಂದ ಮುಷ್ಕರದಲ್ಲಿದ್ದಾರೆ. ಯೂನಿಯನ್‌ನ ಕಾರ್ಯದರ್ಶಿ ಮತ್ತು 7 ಜನ ಸಕ್ರಿಯ ಕಾರ್ಯಕರ್ತರನ್ನು ಸೂಚನೆ ಸಹ ಕೊಡದೇ ಕೆಲಸದಿಂದ ಕಿತ್ತುಹಾಕಿರುವುದನ್ನು ಪ್ರತಿಭಟಿಸಿ ಮುಷ್ಕರ ಪ್ರಾರಂಭವಾಗಿದೆ. ಹಿಂದೆ ಇದೇ ರೀತಿಯ ಕ್ರಮದಿಂದ ಸಿ.ಐ.ಟಿ.ಯು. ಸಂಘಟನೆಯನ್ನು ಮುರಿಯುವುದರಲ್ಲಿ ಯಶಸ್ವಿಯಾಗಿದ್ದ ಮಾಲೀಕರಿಗೆ ಮತ್ತೆ ಕಾರ್ಮಿಕರು ಸಿ.ಐ.ಟಿ.ಯು. ಅಡಿಯಲ್ಲೇ ಪುನರ್ ಸಂಘಟನೆಯಾಗಿರುವುದು ಮಾಲೀಕರಿಗೆ ನುಂಗಲಾರದ ತುತ್ತಾಗಿದೆ. ಹೋರಾಟಕ್ಕೆ ಸಹಕರಿಸಲು ಸಂಘದ ಪದಾಧಿಕಾರಿಗಳು ವಿನಂತಿಸಿಕೊಂಡಿದ್ದಾರೆ.

ಹರಿಹರ :

ದಿನಾಂಕ 4-1-81ರಂದು ಹರಿಹರದಲ್ಲಿ ಮೈಸೂರು ಕಲ್ಲೋಸ್ಕರ್ ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆ ಸೇರಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷ ಕಾಂ. ವಿ. ಜೆ. ಕೆ. ನಾಯರ್ ವಹಿಸಿದ್ದರು. ವಿಶೇಷ ಆಹ್ವಾನಿತರಾಗಿ ಸಿ.ಐ.ಟಿ.ಯು. ಉಪಾಧ್ಯಕ್ಷ ಕಾಮ್ರೇಡ್ ಸೂರ್ಯನಾರಾಯಣರಾವ್ ಆಗಮಿಸಿದ್ದರು. ಕಾಂ. ಸೂರಿಯವರು ಮಾತನಾಡುತ್ತಾ ಸಿ.ಐ.ಟಿ.ಯು.ವಿನ 3ನೇ ಕಾರ್ಯಸಮ್ಮೇಳನವನ್ನು ಹರಿಹರನಲ್ಲಿ ನಡೆಸುವ ತೀರ್ಮಾನವನ್ನ ವಿವರಿಸುತ್ತಾ ಸಮ್ಮೇಳನದ ಸಿದ್ಧತೆಯನ್ನು ಭರದಿಂದ ನಡೆಸಲು ಕರೆಕೊಟ್ಟರು. ರಾಜ್ಯದ ರೈತಹೋರಾಟಕ್ಕೂ, ರೈತರ ಜಾಥಾಕ್ಕೂ ಸ್ವಾಗತಿಸಿ ಬೆಂಬಲಿಸಲು ಮತ್ತು ಸಾರ್ವಜನಿಕ ಉದ್ದಿಮೆಗಳ ಕೈಗಾರಿಕಾ ಕಾರ್ಮಿಕರ ಮುಷ್ಕರ ಬೆಂಬಲಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಆರಂಭದಲ್ಲಿ ಸಂಘದ ಪ್ರಧಾನಕಾರ್ಯದರ್ಶಿ ಕಾಂ. ಪಠಾಣ ಸ್ವಾಗತಿಸಿದರು.

ಮಂಗಳೂರು :

8-1-81ರಂದು ನೈಗೆ ಮಜೂರರ ಮಹಾಸಭೆಯು ಕೆ. ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ವಿಪರೀತ ಬೆಲೆಏರಿಕೆಯಿಂದಾಗಿ ಕಷ್ಟವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಶೇ. 25ರಷ್ಟು ತುಟ್ಟಿಭತ್ತೆಯನ್ನು ಕೊಡಬೇಕೆಂಬ ಬೇಡಿಕೆಯನ್ನು ಮಾಲೀಕರು ನಿರಾಕರಿಸಿದ್ದರಿಂದ ಹೋರಾಟದ ಸಿದ್ಧತೆ ನಡೆಸಲು ಕ್ರಿಯಾಸಮಿತಿ ರಚಿಸಲಾಯಿತು.

ತುಮಕೂರು :

ಅನೇಕ ವರ್ಷಗಳಿಂದ ದುಡಿಯುತ್ತಾ ಬಂದಿದ್ದರೂ ಖಾಯಂ ನೌಕರರೆಂದು ಪರಿಗಣಿಸದೇ ಇರುವುದನ್ನು ಪ್ರತಿಭಟಿಸಿ ತುಮಕೂರು ಜಿಲ್ಲಾ ಮುನಿಸಿಪಲ್ ಕೆಲಸಗಾರರ ಸಂಘದವರು 12-1-81ರಿಂದ ಅನಿರ್ದಿಷ್ಟಕಾಲದ ಮುಷ್ಕರ ಪ್ರಾರಂಭಿಸಿದ್ದಾರೆ. ಮುಷ್ಕರನಿರತ ಕಾರ್ಮಿಕರನ್ನುದ್ದೇಶಿಸಿ ಅಮ್ಮಸಂದ್ರ ಸಿಮೆಂಟ್ ಫ್ಯಾಕರಿಯ ಸಂಘದ ಕಾರ್ಯದರ್ಶಿ ಕಾಂ. ಶಿವಣ್ಣ ಮತ್ತು ತುಮಕೂರು ಜಿಲ್ಲಾ ಕಾರ್ಮಿಕ ಮುಖಂಡರಾದ ಕಾಂ. ಕೆ. ಆರ್. ನಾಯಕರು ಮಾತನಾಡಿದರು. ಮುಷ್ಕರ ಮುಂದುವರಿಯುತ್ತಿದೆ.

●

ರಾಯಚೂರು ತಾಲೂಕು ಚಟುವಟಿಕೆಗಳು

1) ದಿನಾಂಕ 27-12-80ರಂದು ನಗರದ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ತರಗತಿಗಳಿಗೆ ಬಹಿಷ್ಕಾರ ಹಾಕಿ, ಎಸ್.ಎಫ್.ಐ. ಮುಖಂಡತ್ವದಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ತಮ್ಮ ಬೇಡಿಕೆಗಳ ಮನವಿ ಅರ್ಪಿಸಿದರು.

ಇತ್ತೀಚೆಗೆ ರಾಜ್ಯದ ಎಲ್ಲ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಹಾಸನದಲ್ಲಿ ಸಭೆಸೇರಿ ಒಕ್ಕೂಟವನ್ನು ರಚಿಸಿಕೊಂಡಿದ್ದರು. ಈ ಒಕ್ಕೂಟದ ಆದೇಶದ ಮೇರೆಗೆ 1-1-81ರಿಂದ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಾಗಿದೆ.

2) ಪ್ರತಿ ವರ್ಷದಂತೆ ಎಸ್.ಎಫ್.ಐ.ನ ರಾಯಚೂರು ಘಟಕವು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಉಚಿತ ಉಪನ್ಯಾಸವನ್ನು ಪ್ರರಂಭಿಸಿದೆ. ಸುಮಾರು 60 ವಿದ್ಯಾರ್ಥಿಗಳು, 20 ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದಾರೆ.

3) 7-1-81 ರಂದು ಎಸ್.ಎಫ್.ಐ.ನ ಹತ್ತನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ನಗರದ ಕರ್ನಾಟಕ ಸಂಘದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಜ್ಯೂನಿಯರ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಶಾಂತರಸ ಹಾಗೂ ಜಿಲ್ಲಾ ಮಾಧ್ಯಮಿಕ ಶಾಲಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಬಂಡೂರಾವ್ ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರಾರಂಭದಲ್ಲಿ ಕಾಂ. ಬಸವರಾಜ್ ಎಸ್.ಎಫ್.ಐ. ಬೆಳವಣಿಗೆ ಬಗ್ಗೆ ವಿವರಿಸಿದರು. ಎಸ್.ಎಫ್.ಐ.ನ ಮಾಜೀ ಅಧ್ಯಕ್ಷ ಕಾಂ. ಕಲಾಲ್ ಬಂಡಿಯವರೂ ಮಾತಾಡಿದರು. ಕೊನೆಯಲ್ಲಿ ಕಾಂ. ಶ್ಯಾಮಸುಂದರ ವಂದಿಸಿದರು.

5-1-81ರಂದು ಎಸ್.ಎಫ್.ಐ. ಸದಸ್ಯರು ಸಭೆಸೇರಿ ಫೆಬ್ರವರಿ 2ನೇ ವಾರದಲ್ಲಿ ರಾಯಚೂರು ಜಿಲ್ಲಾ ಎಸ್.ಎಫ್.ಐ ಸಮ್ಮೇಳನವನ್ನು ಸಿಂಧನೂರಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಗಿದೆ. ಸಮ್ಮೇಳನಕ್ಕೆ ಎಸ್.ಎಫ್.ಐ.ನ ರಾಜ್ಯ ಮುಖಂಡರನ್ನು ಆಹ್ವಾನಿಸಲಾಗಿದೆ.

6-1-81 ರಂದು ಮಾಧ್ಯಮಿಕ ಶಾಲಾ ನೌಕರರು ನಗರದಲ್ಲಿ ಎಲ್ಲ ಶಾಲೆಗಳಿಗೆ ಬಹಿಷ್ಕಾರ ಹಾಕಿ, ರಾಜ್ಯದ ಶಾಲಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಯಚೂರಕರ್ ಇವರ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ತೆಗೆಯಲಾಯಿತು. ನಗರದ ಎಸ್.ಎಫ್.ಐ. ಸದಸ್ಯರು ತಮ್ಮ ಬೆಂಬಲವನ್ನು ಸೂಚಿಸಿ, ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

○

ಐ.ಟಿ.ಸಿ. ಕಾರ್ಮಿಕರ ಮುಷ್ಕರಕ್ಕೆ ಕರೆ

ಬಹುರಾಷ್ಟ್ರೀಯ ಸಂಸ್ಥೆಯಾದ ಐ.ಟಿ.ಸಿ. ಆಡಳಿತವರ್ಗವು ಕಾರ್ಮಿಕ ಸಂಘವನ್ನು ಮಾನ್ಯಮಾಡಲು ಸಿದ್ಧವಿಲ್ಲ. ಒಕ್ಕೂಟ (All India ITC Workers Federation)ವನ್ನು ಮಾನ್ಯಮಾಡಲು ಸಿದ್ಧವಿಲ್ಲ. ಬೆಂಗಳೂರು ಘಟಕದಲ್ಲಂತೂ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಾ, ಅನೇಕ ಕಾರ್ಮಿಕರನ್ನು ಕೆಲಸದಿಂದ ಹೊರತಳ್ಳಲಾಗುತ್ತಿದೆ.

ಈ ಆಡಳಿತವರ್ಗದ ಭಂಡ ಕೃತ್ಯಗಳನ್ನು ಖಂಡಿಸಿ ಐ.ಟಿ.ಸಿ. ಒಕ್ಕೂಟದ ಕಾರ್ಯಕಾರಿ ಸಮಿತಿಯು ಕಾರ್ಯಕ್ರಮಗಳನ್ನು ಹಾಕಿದೆ. ಡಿಸೆಂಬರ್ 27ರಂದು ಬೆಂಗಳೂರಿನಲ್ಲಿ ನಡೆದ ಒಕ್ಕೂಟದ ಸಭೆಯು, ಅಧ್ಯಕ್ಷರಾದ ಕಾಂ. ಸೋಮನಾಥ ಚಟರ್ಜಿಯವರು ವಹಿಸಿದ್ದರು. ಈ ಸಭೆಯ ತೀರ್ಮಾನದ ಪ್ರಕಾರ ಜ. 16ರಂದು ಕಲಕತ್ತೆಯಲ್ಲಿ ಎಲ್ಲ ಘಟಕಗಳ ಕಾರ್ಮಿಕ ಪ್ರತಿನಿಧಿಗಳ ನೇತೃತ್ವದಲ್ಲಿ ಬೃಹತ್ ಮತಪ್ರದರ್ಶನವನ್ನು ಏರ್ಪಡಿಸಿತ್ತು. ಹಾಗೂ ಫೆಬ್ರವರಿ 5ರಂದು ಒಂದು ದಿನದ ಮುಷ್ಕರಕ್ಕೆ ಕರೆ ನೀಡಲಾಗಿದೆ.

ದಿನಾಂಕ 16ರಂದು ಕಲಕತ್ತೆಯಲ್ಲಿ ನಡೆದ ಮತಪ್ರದರ್ಶನದಲ್ಲಿ ಬೆಂಗಳೂರಿನಿಂದ ಕಾಂ. ಸೂರ್ಯನಾರಾಯಣರಾವ್ ಮತ್ತು ಕಾಂ. ಲೋಕನಾಥನ್ ಭಾಗವಹಿಸಿದ್ದರು.

●

ಸಂಘದ ಹೆಸರು ಬದಲಾವಣೆ

21-12-80ರಂದು "ಚಿಕ್ಕಮಗಳೂರು-ಹಾಸನ್ ಡಿಸ್ಟ್ರಿಕ್ಟ್ಸ್ ಸಾಮಿಲ್ ಆ್ಯಂಡ್ ಜನರಲ್ ವರ್ಕರ್ಸ್ ಯೂನಿಯನ್"ನ ಸರ್ವಸದಸ್ಯರ ಸಭೆ ನಡೆಯಿತು. ಈ ಸಭೆಯಲ್ಲಿ ಸಂಘದ ಹೆಸರನ್ನು ಬದಲಿಸಿ "ಕಾಫಿ ಕ್ಯೂರಿಂಗ್ ಮತ್ತು ಇತರ ಕಾರ್ಮಿಕರ ಸಂಘ" ಎಂಬ ನೂತನ ಹೆಸರನ್ನಿಡಲಾಗಿದೆ. ಕಾರಣ ಸಂಬಂಧಪಟ್ಟವರು ಸಂಘದೊಡನೆ ವ್ಯವಹರಿಸುವಾಗ ಕಾರ್ಯದರ್ಶಿ, ಕಾಫೀ ಕ್ಯೂರಿಂಗ್ ಮತ್ತು ಇತರ ಕಾರ್ಮಿಕರ ಸಂಘ, ಮಲ್ಲಂದೂರು ರಸ್ತೆ, ಚಿಕ್ಕಮಗಳೂರು-577101 ಈ ವಿಳಾಸಕ್ಕೆ ವ್ಯವಹರಿಸಲು ಕಾಂ. ವಿಶ್ವನಾಥರು ವಿನಂತಿಸಿದ್ದಾರೆ.

○

ಮೆರವಣಿಗೆ

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ಪಟ್ಟಣದಲ್ಲಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಪ್ರದೇಶದಲ್ಲಿ ಸೀಮೆ ಎಣ್ಣೆ ಗ್ರಾಹಕರಿಗೆ ದೊರೆಯದೆ ತೊಂದರೆಯಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು 29-12-80ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಪಂಜಿನ ಮೆರವಣಿಗೆ ನಡೆಸಲಾಯಿತು. ಪಡಿತರ ಕಾರ್ಡುಗಳ ಮೇಲೆ ಸೀಮೆ ಎಣ್ಣೆ ವಿತರಣೆಯಾಗಬೇಕು ಎಂಬ ಘೋಷಣೆಗಳೊಂದಿಗೆ ನಡೆದ ಮೆರವಣಿಗೆ ಜನರ ಮನಸೆಳೆಯಿತು.

ನಂತರ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ. ದೊರೆಸ್ವಾಮಿ, ಎನ್. ಮಣಿ, ಪಿ. ರಾಮಚಂದ್ರಪ್ಪ, ವೆಂಕಟರಾಮಪ್ಪ ಮುಂತಾದವರು ಮಾತನಾಡಿದರು.

●

ಆರ್ಥಿಕ ಸಮೀಕ್ಷೆ :

1980ರ ಆರ್ಥಿಕ ದುಃಸ್ಥಿತಿ

ಉರಿಯುವ ಬೆಂಕಿಯಿಂದ ಕುದಿಯುವ ಕಾವಲಿಗೆ

ಆರ್. ಚಂದ್ರ

ಕೇಂದ್ರದಲ್ಲಿ ಇಂದಿರಾಗಾಂಧಿ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು. 'ಕೆಲಸಮಾಡದ ಸರ್ಕಾರ'ದ ಬದಲು 'ಕೆಲಸ ಮಾಡುವ ಸುಭದ್ರ ಸರ್ಕಾರ' ಕೊಡುತ್ತೇವೆ; ಬೆಲೆಏರಿಕೆ, ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ಹೋಗಲಾಡಿಸುತ್ತೇವೆ; ಆರ್ಥಿಕ, ರಾಜಕೀಯ ಸ್ಥಿರತೆ ತರುತ್ತೇವೆ; ಧಕ್ಷ ಆಡಳಿತ ನೀಡುತ್ತೇವೆ ಎಂಬಿತ್ಯಾದಿ ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದ ಇಂದಿರಾ ಸರ್ಕಾರ 1980ರ ವರ್ಷದಲ್ಲಿ ಮಾಡಿದ ಸಾಧನೆಗಳೇನು ?

ತನ್ನ ಸೋಲು, ಅಸಹಾಯಕತೆಗಳನ್ನು ಮರೆಮಾಚಲು ಅಧಿಕಾರ ಪಡೆದ ಹೊಸತಿನಲ್ಲಿ ದೇಶದ ಎಲ್ಲಾ ಆರ್ಥಿಕ ದುಃಸ್ಥಿತಿಗಳಿಗೆ ಹಿಂದಿನ 3 ವರ್ಷಗಳ ಜನತಾ-ಲೋಕದಳ ಸರ್ಕಾರಗಳನ್ನು ಆಪಾದಿಸಲಾಯಿತು. ಸಮಸ್ಯೆಗಳು ಬಗೆಹರಿಯಂದೆ, ಜನಕೋಟಿಯು ತೀವ್ರ ಅಸಮಾಧಾನಗೊಂಡು ಹೋರಾಟದ ದಾರಿ ಹಿಡಿದಾಗ ವಿರೋಧ ಪಕ್ಷಗಳು ಸಹಕರಿಸುವುದಿಲ್ಲ ಎಂದು ಆಪಾದಿಸಲಾಯಿತು. ಕೊನೆಗೆ, 'ಅಡಿಗೆ ಬಿದ್ದರೂ ಮೂಗು ಮೇಲೆ' ಎಂಬಂತೆ, ಒಂದು ವರ್ಷದ ತನ್ನ ಅಧಿಕಾರಾವಧಿಯಲ್ಲಿ ಕೆಲವು ಮಹತ್ವದ ಸಾಧನೆಗಳಾಗಿವೆ ಎಂದೂ ದೇಶದ ಆರ್ಥಿಕ ಪರಿಸ್ಥಿತಿಯು ಅಪಾಯದ ಗಡಿ ದಾಟಿದೆಯೆಂದೂ ಪ್ರಧಾನಮಂತ್ರಿ, ಅರ್ಥಮಂತ್ರಿ, ಮತ್ತಿತರರು ಹೇಳಿಕೊಳ್ಳುತ್ತಿದ್ದಾರೆ. ಇಂತಹ ಪ್ರಚಾರ ಪ್ರಕ್ಷೋಭೆಗಳನ್ನು ಪುಷ್ಟೀಕರಿಸಲಿಕ್ಕೆ ಸರ್ಕಾರದ ಅಂಕೆಸಂಖ್ಯೆಗಳನ್ನು ಬಳಸಲಾಗುತ್ತಿದೆ. ಆದರೆ ಅವುಗಳನ್ನು ಪ್ರಕಟಿಸುತ್ತಿರುವ ಬಂಡವಾಳಶಾಹಿ ಪತ್ರಿಕೆಗಳೇ ಸರ್ಕಾರದ ಸಾಧನೆಗಳನ್ನು ಅಲ್ಲಗಳೆಯುತ್ತಿವೆ. 1980ರ ಆರ್ಥಿಕ ದುಃಸ್ಥಿತಿಯು ಉರಿಯುವ ಬೆಂಕಿಯಿಂದ ಕುದಿಯುವ ಕಾವಲಿಗೆ ಮುಗ್ಗರಿಸಿದೆ ಎಂದು ತಿಳಿಸಿವೆ. 1981ರಲ್ಲಿ ಪರಿಸ್ಥಿತಿ ಇನ್ನಷ್ಟೂ ಹದಗೆಡಲಿರುವುದೆಂದೂ ನಿರೀಕ್ಷಿಸಿವೆ (ಉದಾ : ಫಿನಾನ್ಷಿಯಲ್ ಎಕ್ಸ್‌ಪ್ರೆಸ್ : 1-1-81)

'ಬೆಲೆಏರಿಕೆಯು ದರದಲ್ಲಿ ಇಳಿಮುಖವಾಗಿದೆ, ಕೃಷಿ ಉತ್ಪಾದನೆ ಹೆಚ್ಚಾಗಿದೆ. ವಿದ್ಯುತ್ ಮತ್ತು ಕಲ್ಲಿದ್ದಲು ಉತ್ಪಾದನೆ ಹೆಚ್ಚಾಗಿದೆ. ಕೆಲವು ಬೃಹತ್ ಕೈಗಾರಿಕೆಗಳಲ್ಲಿ ಉದ್ಪಾದನೆ ಏರತೊಡಗಿದೆ, ಮುಷ್ಕರ ಲಾಕೌಟ್‌ಗಳಿಂದ ನಷ್ಟವಾದ ಕೆಲಸದ ದಿವಸಗಳು ಕಡಿಮೆಯಾಗಿವೆ. ಒಟ್ಟಿನಲ್ಲಿ ಆರ್ಥಿಕ ಪರಿಸ್ಥಿತಿ ಅಪಾಯದ ಗಡಿ ದಾಟಿದೆ, ಮುಂದಿನ ವರ್ಷ ಒಳ್ಳೆಯ ಭವಿಷ್ಯ 'ನಿರೀಕ್ಷಿಸಬಹುದು' ಎಂದು ಇಂದಿರಾ ಸರ್ಕಾರದ ಸಧ್ಯದ ಆರ್ಥಿಕ ಸಮೀಕ್ಷೆ. ಆದರೆ, ನಿಜಸ್ಥಿತಿಏನು?

ಬೆಲೆ ಏರಿಕೆ

1979ರಲ್ಲಿ ಹಣದುಬ್ಬರದ ದರವು ಶೇ. 20ರಷ್ಟಾಗಿತ್ತೆಂದೂ, 1980ರಲ್ಲಿ ಅದು ಶೇ. 13ರಷ್ಟೇ ಆಗಿತ್ತೆಂದೂ ಇಂದಿರಾಗಾಂದಿ ಸರ್ಕಾರದ ವಾದ, ಸಮಾಧಾನ. ಮೊದಲನೆಯದಾಗಿ, ಈ ಅಂಕೆಸಂಖ್ಯೆಗಳೇ ತಪ್ಪಾಗಿದೆ. ಗಣ್ಯ ಅರ್ಥಶಾಸ್ತ್ರಜ್ಞರ ಸಮೀಕ್ಷೆಯಂತೆ, 1979ರಲ್ಲಿ ಹಣದುಬ್ಬರದ ದರವು ಶೇ. 23ರಷ್ಟಾಗಿತ್ತೆಂದೂ, 1980ರಲ್ಲಿ ಅದು ಶೇ. 16 ರಷ್ಟಾಗಿತ್ತೆಂದೂ ತಿಳಿದುಬಂದಿದೆ. ಹಣದುಬ್ಬರದ ಬೇಗೆಯಿಂದ ಬೇಯುತ್ತಿರುವ ಜನಕೋಟಿಗೆ ಅದರ ಏರಿಕೆಯ ದರದಲ್ಲಿ ಕಡಿಮೆಯಾದರೆ ತೃಪ್ತಿಯಾದೀತೆ? ಆಶ್ವಾಸನೆಕೊಟ್ಟಿದ್ದು ಬೆಲೆ ಇಳಿಸುವುದಾಗಿ. ಈಗ ಬೆಲೆ ಏರಿಕೆಯ ದರದಲ್ಲಿ ಇಳಿಮುಖವಾಗಿದೆ ಎಂದು ಸಮಾಧಾನ ಹೇಳುತ್ತಿರುವುದು ನಾಚಿಗೆಗೇಡಿತನ! ಜ್ವರದಿಂದ ನರಳುತ್ತಿರುವ ರೋಗಿಗೆ ಜ್ವರ ಏರಿಕೆಯ ದರದಲ್ಲಿ ಇಳಿಮುಖವಾದರೆ ಏನು ಪ್ರಯೋಜನ? ಅವನಿಗೆ ಜ್ವರವೇ ಇಳಿದರೆ ಸಮಾಧಾನ. ಹಾಗೆಯೇ ನೆರೆ ನೀರಿನಲ್ಲಿ ಮುಳುಗಿ ಸಾಯುತ್ತಿರುವವನಿಗೆ ನೆರೆ ನೀರು ಇಳಿದರೆ ಮಾತ್ರ ಸಮಾಧಾನ, ಕೇವಲ ನೆರೆ ನೀರು ಏರಿಕೆಯ ದರದಲ್ಲಿ ಕಡಿಮೆ ಆದರೆ ಏನು ಪ್ರಯೋಜನ? ಇದರಿಂದ ಸ್ಪಷ್ಟವಾಗುವುದೇನೆಂದರೆ, 1979ರಲ್ಲಿ ಶೇ. 23 ರಷ್ಟು ಹಣದುಬ್ಬರವಿದ್ದರೆ, 1980ರಲ್ಲಿ ಶೇ. 16ರಷ್ಟು ಇನ್ನೂ ಹಣದುಬ್ಬರ ಉಂಟಾಗಿ, ಒಟ್ಟು ಎರಡೇ ವರ್ಷಗಳಲ್ಲಿ ಶೇಕಡಾ 39ರಷ್ಟು ಹಣದುಬ್ಬರ ಉಂಟಾಯಿತು ! 1978ರ ಅಂತ್ಯದಲ್ಲಿ ಸಗಟು ಮಾರುಕಟ್ಟೆಯ ಬೆಲೆಸೂಚಿ 181 ಆಗಿದ್ದು, (1970= 100) 1979ರ ಅಂತ್ಯದಲ್ಲಿ 222·6ಕ್ಕೇರಿತು, 1980ರ ಅಂತ್ಯದಲ್ಲಿ ಅದು 256·6ಕ್ಕೆ ನೆಗೆಯಿತು! ಕೈಗಾರಿಕಾ ಕಾರ್ಮಿಕರ ಗ್ರಾಹಕರ ಬೆಲೆಸೂಚಿಯು (1960= 100) 1979ರಲ್ಲಿ 332ರಿಂದ 364ಕ್ಕೇರಿತು, 1980ರಲ್ಲಿ ಅದು 406ಕ್ಕೇರಿತು! ಬೆಲೆಗಳು ಇನ್ನೂ ಏರುತ್ತಲೇ ಇವೆ. ಇಳಿಮುಖವಾಗುವ ಲಕ್ಷಣಗಳೇ ಇಲ್ಲ. ಪರಿಣಾಮವಾಗಿ ರೂಪಾಯಿಯ ಬೆಲೆ 25 ಪೈಸೆಗಿಂತಲೂ ಕಡಿಮೆಯಾಗಿದೆ!

ಇಂದಿರಾ ಸರ್ಕಾರದ ವಾದ್ಯ ಹೇಗಿದೆ ಎಂದರೆ, ಹಿಂದಿನ ಸರಕಾರ ರೂಪಾಯಿಗೆ 23 ಪೈಸೆ ಅಪಹರಿಸುತ್ತಿತ್ತು, ಈಗಿನ ಸರ್ಕಾರ ರೂಪಾಯಿಗೆ 16 ಪೈಸೆ ಅಪಹರಿಸುತ್ತಿದೆ ಎಂದು! ಜನರು ಕೇಳುತ್ತಿರುವುದು, ಅಪಹರಣ, ಶೋಷಣೆ ನಿಲ್ಲಲಿ ಎಂದು! ಇದಕ್ಕೆ ಇಂದಿರಾ ಸರ್ಕಾರದ ಉತ್ತರ ಇಲ್ಲ!

ಕೃಷಿಉತ್ಪಾದನೆ :

1979ರಲ್ಲಿ ಬರಗಾಲದಿಂದಾಗಿ ಆಹಾರಧಾನ್ಯಗಳ ಉತ್ಪಾದನೆಯು ಕೇವಲ 114 ಮಿ. ಟನ್ ಆಗಿತ್ತು. 1980ರಲ್ಲಿ ಮಳೆ ಚೆನ್ನಾಗಿ ಬಂದು ಬೆಳೆಯೂ ಚೆನ್ನಾಗಿರುವುದೆಂದೂ, 135 ಮಿ. ಟನ್ ಆಹಾರಧಾನ್ಯಗಳ ಉತ್ಪಾದನೆ ಆಗುವ ನಿರೀಕ್ಷೆ ಇದೆ ಎಂದೂ, ಇದೊಂದು ಹೊಸ ದಾಖಲೆಯಾಗುವುದೆಂದೂ ಹೇಳಲಾಗುತ್ತಿದೆ. ಮಳೆ ಚೆನ್ನಾಗಿ ಬಂದರೆ. ಬೆಳೆ ಚೆನ್ನಾಗಿ ಬರುವುದು ಸಹಜ. ಯಾವ ಸರ್ಕಾರ ಬಂದರೂ ಭಾರತದ ರೈತರು ಮಳೆಬಂದರೆ ಬೆಳೆತೆಗೆಯುತ್ತಾರೆ. ಇದರಲ್ಲಿ ಇಂದಿರಾ ಸರ್ಕಾರದ ಸಾಧನೆ ಏನು ? ಕಷ್ಟಪಟ್ಟು ಬೆಳೆತೆಗೆದ ರೈತರಿಗೆ ಯೋಗ್ಯಬೆಲೆ ಸಿಗುವುದೇ ? ಇಲ್ಲ. 1980ರ ಒಂದೇ ವರ್ಷದಲ್ಲಿ ಗೊಬ್ಬರದ ಬೆಲೆ ಶೇ. 54ರಷ್ಟು ಏರಿದ್ದಕ್ಕೆ ಸರಿಯಾಗಿ ರೈತರಿಗೆ ಪರಿಹಾರ ಸಿಕ್ಕಿದೆಯೇ ? ಇಲ್ಲ. 1979ರಲ್ಲಿ ಕಬ್ಬಿನ ಬೆಳೆಯು ಕಡಿಮೆಯಾಗಿ ಸಕ್ಕರೆ ಉತ್ಪಾದನೆಯೂ ಕಡಿಮೆಯಾಯಿತು. ಕಳ್ಳಸಂತೆಕೋರರಿಗೆ, ಅಕ್ರಮ ಸಂಗ್ರಹಗಾರರಿಗೆ ಸುಗ್ಗಿಯೇಸುಗ್ಗಿ ! ಸಕ್ಕರೆಗೆ ಕೆ.ಜಿ.ಗೆ ರೂ. 4ರಿಂದ ರೂ. 10, ರೂ. 15, 20ರ ವರೆಗೆ ಬೆಲೆಏರಿತು. ಈಗ ದೇಶದ ರೈತರು 1980ರಲ್ಲಿ 150 ಮಿ. ಟನ್ ಕಬ್ಬು ಬೆಳೆಸಿದ್ದಾರಂತೆ. ಅವರ ಕಬ್ಬಿನ ಬೆಳೆಗೆ ಯೋಗ್ಯ ಧಾರಣೆ ಸಿಗುವುದೇ ? ಸಕ್ಕರೆಯ ಬೆಲೆ ಇನ್ನಾದರೂ ಕುಸಿದೀತೆ ? ಇಲ್ಲ. ಬೇಳೆಕಾಳುಗಳ, ಎಣ್ಣೆಬೀಜಗಳ, ಕೈಗಾರಿಕೋತ್ಪನ್ನಗಳ ಬೆಲೆಗಳು ಹೆಚ್ಚುತ್ತಲೇ ಇವೆ. ಕೃಷಿಉತ್ಪಾದನೆಗಳಿಗೆ ನ್ಯಾಯಬೆಲೆ ಸಿಗುತ್ತಿಲ್ಲ. ಉತ್ಪಾದನೆ ಹೆಚ್ಚಾದಂತೆ ಗ್ರಾಹಕರಿಗೆ ಜೀವನಾವಶ್ಯಕ ವಸ್ತುಗಳು ನ್ಯಾಯ ಬೆಲೆಗೆ ಸಿಗುವುದಿಲ್ಲ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನೆಗೂ, ವಿತರಣೆಗೂ, ಬೆಲೆಗಳಿಗೂ ಸಂಬಂಧಗಳಿರುವುದಿಲ್ಲ. ಅವುಗಳು ಸ್ಥಾಪಿತ ಹಿತಾಸಕ್ತಿಗಳ, ರಾಜಕೀಯ ಪುಢಾರಿಗಳ, ಸ್ವಾರ್ಥಸಾಧಕರ ನಿಯಂತ್ರಣದಲ್ಲಿರುವುದರಿಂದ ಜನಸಾಮಾನ್ಯರ, ದುಡಿಯುವ ಜನರ ಬವಣೆ ತಪ್ಪಿದ್ದಲ್ಲ.

ಆದುದರಿಂದಲೇ, ದೇಶಾದ್ಯಂತ 1980ರಲ್ಲಿ ಬೃಹತ್ ಪ್ರಮಾಣದಲ್ಲಿ ರೈತರ ಚಳುವಳವು ಭುಗಿಲೆದ್ದಿತು. ಬಡತನ ಹೋಗಲಾಡಿಸುವುದಾಗಿ ಭರವಸೆಕೊಟ್ಟು ಅಧಿಕಾರಕ್ಕೆ ಬಂದ ಇಂದಿರಾ ಸರ್ಕಾರ ಬಡರೈತರ ಭಾರೀ ಚಳವಳವನ್ನು ಎದುರಿಸುತ್ತಿದೆ. ಆ ಕುರಿತು ಆಳುವ ಪಕ್ಷದ ನಿಲುವಿನಲ್ಲಿಯೇ ತೀವ್ರ ಭಿನ್ನಾಭಿಪ್ರಾಯವಿದ್ದು, ಪಕ್ಷದ ಬಿಕ್ಕಟ್ಟಿಗೆ ಕಾರಣವಾಗಿದೆ.

ಕೈಗಾರಿಕಾ ಉತ್ಪಾದನೆ

ವಿದ್ಯುತ್, ಕಲ್ಲಿದ್ದಲು, ಮತ್ತಿತರ ಕೈಗಾರಿಕಾ ಉತ್ಪಾದನೆಗಳು ಹೆಚ್ಚುತ್ತಿವೆ ಎಂದು ಹೇಳಲಾಗಿದೆ. ಆದರೆ, ವಿದ್ಯುತ್ ಉತ್ಪಾದನೆಯ ಹೆಚ್ಚಳಕ್ಕೆ ಇಂದಿರಾಗಾಂಧಿ ಸರ್ಕಾರ ಕಾರಣವಲ್ಲ. ಚೆನ್ನಾಗಿ ಮಳೆಬಂದು ಜಲಾಶಯ ತುಂಬಿದಾಗ ಜಲವಿದ್ಯುತ್ ಉತ್ಪಾದನೆ ಸಹಜವಾಗಿಯೇ ಹೆಚ್ಚುವುದು. ಅಷ್ಟಾಗಿಯೂ ವಿದ್ಯುತ್ ಉತ್ಪಾದನೆ ಹೆಚ್ಚಿದ್ದು ಕೇವಲ ಶೇ. 5ರಷ್ಟು. ವಿದ್ಯುತ್ ಉತ್ಪಾದನಾ ಕೇಂದ್ರಗಳ ಶೇ. 50ರಷ್ಟು ಸಾಮರ್ಥ್ಯವು ನಿರುಪಯೋಗವಾಗಿ ಹಾಳುಬಿದ್ದಿದೆ. ಸಿಮೆಂಟಿನ ಉತ್ಪಾದನೆಯು ಕುಸಿದಿದ್ದು, ನಿಯಂತ್ರಿತ ಬೆಲೆಯು ಚೀಲಕ್ಕೆ ರೂ. 33 ಆಗಿದ್ದರೆ, ಕಳ್ಳಸಂತೆಯಲ್ಲಿ ಅದರ ಬೆಲೆಯು ರೂ. 100ಕ್ಕೂ ಮೀರಿದೆ. ರೈಲ್ವೆ ಖಾತೆಯು ನಷ್ಟದ ದಾರಿ ಹಿಡಿದಿದೆ. 1980ರಲ್ಲಿ ಕೈಗಾರಿಕೋತ್ಪಾದನೆ ಹೆಚ್ಚಿಸಲು ಇಂದಿರಾ ಸರ್ಕಾರ ಬಂಡವಾಳಶಾಹಿಗಳಿಗೆ ವಿಶೇಷ ಸಹಾಯ ಸಹಾಕಾರ ನೀಡಿತು. ತೆರಿಗೆ ವಿನಾಯತಿ, ಲೈಸನ್ಸ್ ಧೋರಣೆಯಲ್ಲಿ ಸಡಿಲುನೀತಿ, ರಫ್ತು ವ್ಯಾಪಾರಕ್ಕೆ ಹೆಚ್ಚಿನ ಪ್ರೋತ್ಸಾಹ, ಏಕಸ್ವಾಮ್ಯ ಸಂಸ್ಥೆಗಳ ಮೇಲಿನ ನಿಯಂತ್ರಣದಲ್ಲಿ ಸಡಿಲುಧೋರಣೆ, ಅಕ್ರಮವಾಗಿ ಅವುಗಳು ತಮ್ಮ ವ್ಯವಹಾರ ಹೆಚ್ಚಿಸಿಕೊಂಡಿದ್ದಕ್ಕೆ ಮಾನ್ಯತೆ, ಇತ್ಯಾದಿಗಳನ್ನು ನೀಡಲಾಯಿತು. ಆದರೆ, ನಿರೀಕ್ಷಿಸಿದಷ್ಟು ಕೈಗಾರಿಕೋತ್ಪಾದನೆ ಆಗಲಿಲ್ಲ. ಇತ್ತೀಚೆಗೆ ಪ್ರಧಾನ ಮಂತ್ರಿ ಮತ್ತು ಅರ್ಥಮಂತ್ರಿ ಕೈಗಾರಿಕೋಧ್ಯಮಿಗಳ ಸೋಲಿಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಅವರು ಸುಲಭವಾಗಿ ಲಾಭಗಿಟ್ಟಿಸಲು ಸರ್ಕಾರದಿಂದ ಹೆಚ್ಚುಹೆಚ್ಚು ಸಹಾಯ ಸವಲತ್ತುಗಳನ್ನು ಪಡೆಯಲು ಪ್ರಯತ್ನಿಸುವರೇ ಹೊರತು, ಉತ್ಪಾದನೆಯಲ್ಲಿ ಹೆಚ್ಚಿನ ಆಸಕ್ತಿ ತೋರಿಸುವುದಿಲ್ಲ. ಹೊಸ ಬಂಡವಾಳ ಹೂಡುವುದಿಲ್ಲ.

ಬೆಲೆ ಏರಿಕೆಯಿಂದಾಗಿ ಜೀವನಮಟ್ಟ ಕುಸಿಯುತ್ತಿರುವಾಗ ಕೈಗಾರಿಕಾ ಕಾರ್ಮಿಕರು ತಮ್ಮ ತುಟ್ಟಿಭತ್ತೆ, ಬೋನಸ್, ವೇತನ ಪರಿಷ್ಕರಣಕ್ಕೆ ಹೋರಾಟದ ದಾರಿ ಹಿಡಿದಿದ್ದಾರೆ. ಇದರ ವಿರುದ್ಧ ಕೈಗಾರಿಕೋದ್ಯಮಿಗಳು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದಾರೆ. ಕಾರ್ಮಿಕರ ಮುಷ್ಕರ ನಿಷೇಧಿಸುವ ಶಾಸನ ಹೊರಡಿಸಲು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ರಾಷ್ಟ್ರೀಯ ರಕ್ಷಣಾ ಕಾನೂನಿನಂತೆ, ವಿಚಾರಣೆ ಇಲ್ಲದೆ ಮುಷ್ಕರ ನಿರತ ಕಾರ್ಮಿಕರನ್ನೂ ಅವರ ಮುಖಂಡರನ್ನೂ ಬಂಧಿಸಲು ಒತ್ತಾಯಿಸುತ್ತಿದ್ದಾರೆ.

ಬೆಲೆ ಏರಿಕೆಯಿಂದಾಗಿ, ಜನಸಾಮಾನ್ಯರ ಗ್ರಾಹಕ ಶಕ್ತಿಯು ಕುಸಿದು ಆಂತರಿಕ ಮಾರುಕಟ್ಟೆಯು ಕ್ಷಯಿಸುವುದು. ಪರಿಣಾಮವಾಗಿ ಸಣ್ಣ, ಮಧ್ಯಮ, ಕೆಲವು ದೊಡ್ಡ ಕೈಗಾರಿಕಾ ಸಂಸ್ಥೆಗಳು ದಿವಾಳಿಯ ದಾರಿಯಲ್ಲಿರುವುವು. ರಾಷ್ಟ್ರೀಕೃತ ಬ್ಯಾಂಕುಗಳ ಒಂದು ಸಮೀಕ್ಷೆಯಂತೆ ಈಗಾಗಲೇ ದೇಶದಲ್ಲಿ ಒಟ್ಟು 21,000 ಅಂತಹ ರೋಗಗ್ರಸ್ಥ ಕೈಗಾರಿಕಾ ಸಂಸ್ಥೆಗಳಿವೆ. ಇವುಗಳಲ್ಲಿ ಉದ್ಯೋಗದಲ್ಲಿರುವ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಸಂಭವವಿದೆ. ಉದ್ಯೋಗ ಭದ್ರತೆಗೆ ಅವರು ಅನಿವಾರ್ಯವಾಗಿ ಹೋರಾಡಬೇಕಾಗುವುದು. ಆಗಲೂ, ಕೈಗಾರಿಕೋದ್ಯಮಿಗಳು, ಗುತ್ತೇದಾರಿ ಬಂಡವಾಳಗಾರರು ತಮ್ಮ ಲಾಭವನ್ನು ಕಾಯ್ದುಕೊಳ್ಳಲು ಬಲವಂತದ ಲೇಆಫ್, ಲಾಕ್‌ಔಟುಗಳನ್ನು ಸಾರುವರು. ಕೈಗಾರಿಕಾ ರಂಗದಲ್ಲಿ ಗಂಭೀರ ಪರಿಸ್ಥಿತಿ ಇರುವುದರಿಂದ ಆರ್ಥಿಕ ಪರಿಸ್ಥಿತಿ ಪುನಃಶ್ಚೇತನಗೊಳ್ಳುವುದೆಂಬ ನಿರೀಕ್ಷೆ ಕೇವಲ ಒಂದು ಭ್ರಮೆ!

ವಿದೇಶಿ ವ್ಯಾಪಾರದಲ್ಲಿ ಕೊರತೆ

1977-78ರಿಂದ ವಿದೇಶಿ ವ್ಯಾಪಾರದಲ್ಲಿ ಕೊರತೆ ಕಂಡುಬರುತ್ತಿದೆ. ಆ ವರ್ಷ ಒಟ್ಟು ಕೊರತೆ ರೂ. 621 ಕೋಟಿಯಾಗಿದ್ದು, 1978-79ರಲ್ಲಿ ರೂ. 1083 ಕೋಟಿ ಕೊರತೆ ಉಂಟಾಯಿತು. 1979-80ರಲ್ಲಿ ರೂ. 2232 ಕೋಟಿ ಕೊರತೆ ಬಂತು. 1979-81ರಲ್ಲಿ ಒಟ್ಟು ಕೊರತೆ ರೂ. 4200 ಕೋಟಿಯಷ್ಟಾಗುವುದೆಂಬ ಭಯವಿದೆ. ಅಂದೆ ನಮ್ಮ ಆಮದು ಹೆಚ್ಚುತ್ತಿದೆ. ರಫ್ತು ಕಡಿಮೆಯಾಗುತ್ತಿದೆ. ರಫ್ತು ವ್ಯಾಪಾರಕ್ಕೆ ಎಷ್ಟೆಲ್ಲಾ ಪ್ರೋತ್ಸಾಹ ಕೊಟ್ಟರೂ ಅದು ನಿರೀಕ್ಷಿಸಿದಷ್ಟು ಹೆಚ್ಚುತ್ತಿಲ್ಲ. ಕಾರಣ ಇತರ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿಯೂ

[6ನೇ ಪುಟ ನೋಡಿ]

ಹಳೇ ಜನಸಂಘಕ್ಕೆ ಹೊಸ ಮುಖವಾಡ

ಇ.ಎಂ.ಎಸ್. ನಂಬೂದಿರಿಪಾದ್

ಏಕಸ್ವಾಮ್ಯ ಪತ್ರಿಕೋದ್ಯಮಕ್ಕೆ ಈಗ ಬಹಳ ಸಂತೋಷವಾಗಿದೆ. ಕಾಂಗ್ರೆಸ್ (ಐ)ಗೆ ಬೂರ್ಜ್ವಾ ಪರ್ಯಾಯವೊಂದು ರೂಪುಗೊಳ್ಳುತ್ತಿದೆ. ಏಕಸ್ವಾಮ್ಯದ ಮುಖವಾಣಿಗಳಲ್ಲಿ ಒಂದರ ಸಂಪಾದಕೀಯದಲ್ಲಿ ''ಬಿಜೆಪಿಯ ಹೊಸಮುಖ'' ಎಂದು ಶೀರ್ಷಿಕೆ ಇದೆ. ಇನ್ನೊಂದು ಬಿಜೆಪಿಯ ''ಸಫಲ ಸಮ್ಮೇಳನ'' ಎಂದು ಹೇಳಿದೆ.

ಜನಸಂಘ ಒಂದು ಮತೀಯ ಪಕ್ಷ ಎನ್ನುವ ಪ್ರಸಿದ್ಧಿಯನ್ನು ತೊಡೆದು ಹಾಕಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಟೈಮ್ಸ್ ಆಫ್ ಇಂಡಿಯಾಗೆ ತುಂಬ ಸಂತೋಷವಾಗಿದೆ. ಆರ್ಥಿಕ ಮತ್ತು ವಿದೇಶಿ ನೀತಿಯ ಬಗ್ಗೆ ಶ್ರೀ ವಾಜಪೇಯಿ ಕೊಟ್ಟಿರುವ ವಿವರಣೆಗಳು ಸ್ವಾಗತಾರ್ಹ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಹೇಳಿದೆ. ಆರೆಸ್ಸೆಸ್‌ನ ಕಟುಸಂಪ್ರದಾಯಸ್ಥರಿಗೂ ಉದಾರವಾದಿಗಳಾದ ವಾಜಪೇಯಿ, ಅಡ್ವಾನಿ, ಮತ್ತಿತರರಿಗೂ ನಡೆದ ದೊಡ್ಡ ವಿವಾದವನ್ನು ಪತ್ರಿಕೆಗಳು ರಸವತ್ತಾಗಿ ಬಣ್ಣಿಸುತ್ತಿವೆ. ಜನಸಂಘಕ್ಕೆ ಅಂಟಿಕೊಂಡಿದ್ದ ಹಿಂದೂ ಪುನಶ್ಚೇತನವಾದದ ಭ್ರಮೆಯಿಂದ ಹೊಸ ಪಕ್ಷ ದೂರವಾಗಿ, ಆಧುನಿಕ, ಜಾತ್ಯತೀತ ಪ್ರಜಾಪ್ರಭುತ್ವವಾದಿ ಪಕ್ಷವಾಗಿದೆಯೆಂದು ಹೇಳಲಾಗಿದೆ.

ಆದರೆ ಸಮ್ಮೇಳನದಲ್ಲಿ ಅಂಗೀಕೃತವಾದ ನೀತಿಗಳ ದಾಖಲೆಗಳು ಮತ್ತು ಭಾಷಣಗಳನ್ನು ಎಚ್ಚರಿಕೆಯಿಂದ ಗಮನಿಸಿದರೆ ಅದು ಸುಳ್ಳು ಎಂಬುದು ತಿಳಿದುಬರುತ್ತದೆ. ಈ ದಾಖಲೆಗಳಿಗೆ ಎಷ್ಟೇ ಬಣ್ಣ ಬಳಿದಿದ್ದರೂ ಆರ್ಥಿಕ ಮತ್ತು ರಾಜಕೀಯ ನೀತಿ ಗೊತ್ತುವಳಿಗಳು ಅವರ ಜಾತ್ಯತೀತ ಹೇಳಿಕೆಗಳನ್ನು ಸಮರ್ಥಿಸುವುದಿಲ್ಲ.

ಎಲ್ಲಾ ಬೂರ್ಜ್ವಾ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳ ಹಾಗೆ ಬಿಜೆಪಿ ಕೂಡ ತನ್ನ ಆರ್ಥಿಕ ನೀತಿಯಲ್ಲಿ, ತಾನು ಬಂಡವಾಳಶಾಹಿ ಮತ್ತು ಸಮತಾವಾದ ಎರಡಕ್ಕೂ ವಿರೋಧಿ ಎಂದು ಘೋಷಿಸಿಕೊಳ್ಳುತ್ತದೆ. ಇದಕ್ಕೆ ಬದಲು ಅದು ಪುರುಷಾರ್ಥಗಳನ್ನು ಆಧರಿಸುತ್ತದೆ. ಈಗ ಅವರು "ಗಾಂಧಿ ಸಮಾಜವಾದ" ಎಂದು ಕಲ್ಪಿಸಿಕೊಳ್ಳುತ್ತಿರುವುದು ಹಿಂದೆ ಹಿಂದೂರಾಷ್ಟ್ರ ಎಂದು ಮಾರಾಟ ಮಾಡಿದುದನ್ನೇ.

ಬ್ರಿಟಿಷರದು ಒಡೆದು ಆಳುವ ನೀತಿ ಆಗಿತ್ತು. ಶ್ರೀಮತಿ ಗಾಂಧಿಯವರ ಜಾತ್ಯತೀತತೆಯ ಮಾದರಿಯು ಭಾರತೀಯ ಜನತೆಯ ಅನೈಕ್ಯತೆ ಮತ್ತು ಅಪನಂಬಿಕೆಗಳ ಮೂಲ ಕಾರಣವಾಗಿದೆ. ಭಾರತೀಯ ಜನತಾ ಪಕ್ಷವು, ಜಾತಿಮತ ಲೆಕ್ಕಿಸದೆ, ಎಲ್ಲ ಭಾರತೀಯ ಪ್ರಜೆಗೂ ದೇಶದ ಭವಿಷ್ಯವನ್ನು ರೂಪಿಸುವ ಸಮಾನ ಅವಕಾಶವನ್ನು ಕೊಡುತ್ತದೆ ಎಂದು ಹೇಳಿಕೊಂಡಿದ್ದಾರೆ.

ಬಹುಸಂಖ್ಯಾತರ ಅಥವಾ ಅಲ್ಪಸಂಖ್ಯಾತರ ಜಾತೀಯವಾದ ಈಗ ಇಲ್ಲವೇ ಇಲ್ಲ. ಜಾತೀಯ ಭಾವನೆಗಳು ಮತ್ತು ದಂಗೆಗಳನ್ನು ಕೆರಳಿಸಿದ್ದು ಆಗ ಬ್ರಿಟಿಷರು, ಈಗ ಶ್ರೀಮತಿ ಗಾಂಧಿಯವರ ಕಾಂಗ್ರೆಸ್. ಜಾತೀಯ ಶಾಂತಿ ಬರಬೇಕಾದರೆ ಶ್ರೀಮತಿ ಗಾಂಧಿಯವರ ಜಾತ್ಯತೀತ ನೀತಿ ಮಾದರಿಯನ್ನು ನಾಶಮಾಡಬೇಕು-ಇದು ಅವರ ವಾದ.

ನಾವೂ ಕೂಡ ಆ ಮಾದರಿಯ ವಿರೋಧಿಗಳೇ. ಆದರೆ ಸರ್ಕಾರ ಮತ್ತು ಧರ್ಮ ಎರಡೂ ಬೇರೆ ಬೇರೆ ಎಂಬ ಜಾತ್ಯತೀತತೆಯ ಮಾದರಿಗೆ ಮಾತ್ರ ನಾವು ಅಂಟಿಕೊಂಡಿದ್ದೇವೆ. ಇದರ ಜೊತೆಗೆ ಮೊದಲಿನ ಆರೆಸ್ಸೆಸ್ ಮತ್ತು ಜನಸಂಘದ ಹಿಂದೂ ಪುನಶ್ಚೇತನವಾದವನ್ನೂ ವಿರೋಧಿಸುತ್ತೇವೆ. ಜಾತೀಯ ಶಾಂತಿಗೆ ಇವೇ ದೊಡ್ಡ ಧಕ್ಕೆಯನ್ನು ತರುತ್ತಿವೆ ಎಂದೂ ನಾವು ಭಾವಿಸುತ್ತೇವೆ. ಕೋಮು ಗಲಭೆಗಳಿಗೆ ಆರೆಸ್ಸೆಸ್ ಮುಂತಾದುವು ಹಾನಿ ಮಾಡುತ್ತಿವೆ ಎಂದು ಹೇಳುವುದಕ್ಕೆ ಬಿಜೆಪಿಯಂಥ ಪಕ್ಷ ಹಿಂಜರಿಯುತ್ತಿರುವುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ತಾವು ಜಾತ್ಯತೀತ ಎಂದು ಹೇಳಿಕೊಳ್ಳುತ್ತಿರುವುದು ಆಶ್ಚರ್ಯಕರ.

ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡಬೇಕು ಎಂದು ರಾಜಾಸ್ತಾನದ ಹಿಂದಿನ ಮಂತ್ರಿ ಮೆಹಬೂಬ್ ಆಲಿ ಅವರು ಒತ್ತಾಯಿಸಿದಾಗ ಅವರ ಮನವಿಯನ್ನು ತಿರಸ್ಕರಿಸಲಾಯಿತು. "ಅಲ್ಪಸಂಖ್ಯಾತರೇನು ಎರಡನೇ ದರ್ಜೆ ಪ್ರಜೆಗಳಲ್ಲ. ಸಂವಿಧಾನದ ಪ್ರಕಾರ ಬಹುಸಂಖ್ಯಾತರಂತೆಯೇ ಅವರಿಗೂ ಸಮಾನ ಹಕ್ಕುಗಳು ಇವೆ. ಆದ್ದರಿಂದ ಅಲ್ಪಸಂಖ್ಯಾತ ಬಹುಸಂಖ್ಯಾತ ಎಂಬ ಪದಗಳನ್ನು ಉಪಯೋಗಿಸುವುದನ್ನು ನಿಲ್ಲಿಸಬೇಕು", ಎಂದು ವಾದ ಮಾಡಲಾಯಿತು.

ಹಿಂದೂ ರಾಷ್ಟ್ರ ಮುಂತಾದ ತತ್ವಗಳು ಚುನಾವಣೆಯ ರಾಜಕೀಯ ಚಟುವಟಿಕೆಯ ಮೇಲೆ ಕೆಟ್ಟ ಪ್ರಭಾವ ಬೀರುತ್ತವೆ ಎಂಬುದನ್ನು ಅವರು ಈಗ ಅರಿತಿದ್ದಾರೆ. ಆದ್ದರಿಂದ "ಗಾಂಧೀ ಸಮಾಜವಾದ"ಕ್ಕೆ ಅವರು ಬದಲಾಯಿಸಿಕೊಂಡಿದ್ದಾರೆ.

ಆದರೆ ಇಂಥ ಆಧುನಿಕ ಮುಖವಾಡವು ಕಟು ಆರೆಸ್ಸೆಸ್ ನಾಯಕತ್ವಕ್ಕೆ ಹಿಡಿಸುವುದೇ ? ಈಗ ಆರೆಸ್ಸೆಸ್ ಮತ್ತು ಬಿಜೆಪಿಗಳ ನಡುವೆ ಒಂದು ದೊಡ್ಡ ಯುದ್ಧವೇ ನಡೆಯಬಹುದು. ಸಮ್ಮೇಳನದಲ್ಲಿ ರಾಜಮಾತೆಯ ಚಟುವಟಿಕೆ ಇದಕ್ಕೆ ಮುನ್ಸೂಚನೆ ಆಗಿರಬಹುದು.

ಈ ಮಧ್ಯೆ, ಬಿಜೆಪಿಯ ಆರ್ಥಿಕ, ರಾಜಕೀಯ ಮತ್ತು ವಿದೇಶಿ ನೀತಿಗಳು ಕಾಂಗ್ರೈಗಿಂತ ಭಿನ್ನವೇ ಎಂಬುದನ್ನು ಪರಿಶೀಲಿಸಬಹುದು: ವಿದೇಶಿ ನೀತಿಯಲ್ಲಿ ಬಿಜೆಪಿ ಸೋವಿಯೆತ್ ವಿರೋಧಿ. ಭಾರತ ಸಾಮ್ರಾಜ್ಯಶಾಹಿಯತ್ತ ವಾಲಬೇಕೆಂದು ಅವರ ಅಪೇಕ್ಷೆ. ಆರ್ಥಿಕ ನೀತಿ "ಗಾಂಧಿ ಸಮಾಜವಾದ"ದ ಬಗ್ಗೆ ಹೇಳುತ್ತದೆ. ಮಹಾತ್ಮ, ಲೋಕನಾಯಕ ಜಯಪ್ರಕಾಶ ಮತ್ತು ದಿವಂಗತ ಆರೆಸ್ಸೆಸ್ ನಾಯಕ ದೀನದಯಾಳ ಉಪಾಧ್ಯಾಯ ಇವರ ಸಿದ್ಧಾಂತಗಳನ್ನು ಒಟ್ಟುಗೂಡಿಸಬೇಕಂತೆ. ಇವರು ಏಕಸ್ವಾಮ್ಯದಾರರ ಬಗ್ಗೆ ಅಕ್ಷರಶಃ ಏನನ್ನೂ ಹೇಳಿಲ್ಲ. ಬದಲು ಸಾರ್ವಜನಿಕ ವಲಯದಿಂದ ಹೆಚ್ಚು ಆರ್ಥಿಕ ಚಟುವಟಿಕೆಗಳನ್ನು ಖಾಸಗಿ ವಲಯಕ್ಕೆ ಸಾಗಿಸಬೇಕೆಂದು ಅವರು ಹೇಳುತ್ತಾರೆ.

ಕಪ್ಪು ಹಣವನ್ನು ನಾಶಮಾಡುವ ನೀತಿಯ ಹೆಸರಿನಲ್ಲಿ ಅವರ ಆರ್ಥಿಕ ನೀತಿಯು, ನೇರ ತೆರಿಗೆಯನ್ನು ತಗ್ಗಿಸಬೇಕು, ಮಾರಾಟ ತೆರಿಗೆ ಬದಲು ಇನ್ನಷ್ಟು ಎಕ್ಸೈಸ್ ಹಾಕಬೇಕು ಎಂದು ಶಿಫಾರಸು ಮಾಡುತ್ತದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಬೇಕೆಂದು ಒತ್ತಾಯಿಸುತ್ತಲೇ ಅವರ ಆರ್ಥಿಕ ಗೊತ್ತುವಳಿಯು ದಾಸ್ತಾನನ್ನು ಸಂಗ್ರಹಿಸುವುದರ ಬಗ್ಗೆ ಏನನ್ನೂ ಹೇಳುವುದಿಲ್ಲ.

ಒಂದು ಮಾತಿನಲ್ಲಿ ಹೇಳುವುದಾದರೆ ಅವರ ಆರ್ಥಿಕ ಗೊತ್ತುವಳಿಯು ಏಕಸ್ವಾಮ್ಯದಾರರ ಮತ್ತು ಕೃಷಿ ವಲಯದ ಅವರ ವರ್ಗಸೋದರರ ಹೃದಯಗಳನ್ನು ಹಿಗ್ಗಿಸುತ್ತದೆ.

ಆದರೆ ಇಂಥ ಪಕ್ಷದ ಉದಯವನ್ನು ಏಕಸ್ವಾಮ್ಯ ಪತ್ರಿಕೋದ್ಯಮವು ಸ್ವಾಗತಾರ್ಹ ಬೆಳವಣಿಗೆ ಎಂದು ಹೊಗಳುತ್ತಿರುವುದು ವಿಸ್ಮಯ. ಪಟ್ಟಭದ್ರ ಹಿತಾಸಕ್ತಿಗಳಿಗೆ ಹೆದರಿಕೆ ತಂದಿರುವ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯ ಉದಯಕ್ಕೆ ಈ ಪಕ್ಷದ ಬೆಳವಣಿಗೆ ಅಡ್ಡಿ ತರುತ್ತದೆ ಎಂದು ಅವರು ಆಶಿಸುತ್ತಿದ್ದಾರೆ.

●

ಕೆ.ಜಿ.ಎಫ್.ನಲ್ಲಿ ಗಣಿ ಕಾರ್ಮಿಕರ ಬೃಹತ್ ಬಹಿರಂಗ ಸಭೆ

ದಿನಾಂಕ 8-1-81 ರಂದು ಕೆ.ಜಿ.ಎಫ್. ನಲ್ಲಿ ಚಿನ್ನದ ಗಣಿ ಕಾರ್ಮಿಕರ ಬಹಿರಂಗ ಸಭೆ ನಡೆಯಿತು. ಮುಖ್ಯ ಅತಿಥಿಯಾಗಿ ಕಾಂ. ಪಿ. ರಾಮಮೂರ್ತಿ (ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಹಾಗೂ ಎಂ. ಪಿ.) ಯವರು ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ವಹಿಸಿದ್ದರು.

ಕೆ.ಜಿ.ಎಫ್.ನ ರೈಲ್ವೆ ನಿಲ್ದಾಣದ ಪಕ್ಕದಲ್ಲಿ ನೂತನವಾಗಿ ಕಟ್ಟಲ್ಪಟ್ಟ "ಭಾರತ ಗೋಲ್ಡ್‌ಮೈನ್ಸ್ ಎಂಪ್ಲಾಯೀಸ್ ಯೂನಿಯನ್"ನ ಆಫೀಸಿನ ಕಟ್ಟಡದ ಪ್ರಾರಂಭೋತ್ಸವವನ್ನು ಕಾಂ. ಪಿ. ರಾಮಮೂರ್ತಿಯವರು ನೆರವೇರಿಸಿದರು.

ಕಾಂ. ಪಿ. ಆರ್. ಮಾತನಾಡುತ್ತಾ ಕಲ್ಲಿದ್ದಲು ಗಣಿ ಕಾರ್ಮಿಕರಿಗೆ ದೊರೆಯುತ್ತಿರುವ ವೇತನದ ಸಮಾನವಾಗಿ ಚಿನ್ನದ ಗಣಿ ಕಾರ್ಮಿಕರಿಗೂ ಕೊಡಬೇಕೆಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಕುರಿತು ಮಾತನಾಡಿದ ಕಾಂ. ಪಿ. ಆರ್. ಈ ಕಾರ್ಮಿಕರನ್ನು ಬೆಂಬಲಿಸುವಂತೆ ಕೇಳಿಕೊಂಡರು.

ಸಂಘದ ಕಾರ್ಯದರ್ಶಿ ಕಾಂ. ಸಮರಿದಾಸರು ಕಾರ್ಮಿಕರ ಪರವಾಗಿ 10,000 (ಹತ್ತು ಸಾವಿರ) ರೂಗಳನ್ನು ಕೇಂದ್ರ ಸಿ. ಐ. ಟಿ. ಯು. ವಿಗೆ ಅರ್ಪಿಸಿದರು. ಕಾಂ. ಪಿ. ಆರ್. ಸಿ. ಐ. ಟಿ. ಯು. ಪರವಾಗಿ ಈ ಹಣವನ್ನು ಸ್ವೀಕರಿಸಿದರು. ಅಲ್ಲದೆ ಕರ್ನಾಟಕ ರಾಜ್ಯ ಸಮಿತಿಗೂ 10,000 (ಹತ್ತು ಸಾವಿರ) ರೂ.ಗಳನ್ನು ಅರ್ಪಿಸಿದರು. ಈ ಹಣವನ್ನು ಕಾಂ. ಸೂರಿಯವರು ಸ್ವೀಕರಿಸಿದರು.

ಸಭೆಯನ್ನು ಉದ್ದೇಶಿಸಿ ಕಾಂ. ಟಿ. ಎಸ್. ಮಣಿ, ಕಾಂ. ಕಣ್ಣನ್ ಮತ್ತು ಕಾಂ. ಮುತ್ತು ಕುಮಾರ್ ಇವರೆಲ್ಲಾ ಮಾತನಾಡಿದರು. ಸಭೆಯಲ್ಲಿ ಪಬ್ಲಿಕ್ ಸೆಕ್ಟಾರ್ ಕಾರ್ಮಿಕರ ಮುಷ್ಕರ ಬೆಂಬಲಿಸುವ, ಕೆ.ಜಿ.ಎಫ್.ನ ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗಳನ್ನು ಬೆಂಬಲಿಸುವ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

○

ಶ್ರದ್ಧಾಂಜಲಿ

ಚಿತ್ರದುರ್ಗ ಜಿಲ್ಲಾ, ಹರಿಹರ ತಾಲ್ಲೂಕಿನ ಹಿರಿಯ ಮಾರ್ಕ್ಸ್‌ವಾದಿ ಧುರೀಣ ಕಾಂ. ಎಲ್. ಸೀತಾಪತಿಯವರು ತಾ. 13-1-1981 ರಂದು ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಅವಿಭಾಜ್ಯ ಕಮ್ಯುನಿಸ್ಟ್ ಚಳುವಳಿಯ ಕಾಲದಿಂದ ಕಾರ್ಮಿಕ ರಂಗದಲ್ಲಿ ಸತತವಾಗಿ ದುಡಿದವರು. 1964 ರಿಂದೀಚೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿ ಸ್ಥಳೀಯ ಹೋರಾಟಗಳನ್ನು ಸಂಘಟಿಸಿ ಹಲವಾರು ಬಾರಿ ಜೈಲಿಗೆ ಹೋಗಬೇಕಾಯಿತು. ತುರ್ತುಪರಿಸ್ಥಿತಿಯಲ್ಲಿ ಎಂಟು ತಿಂಗಳು ಜೈಲುವಾಸ ಅನುಭವಿಸಿದ್ದಲ್ಲದೆ, ಸರ್ಕಾರ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿದ್ದರ ಪರಿಣಾಮವಾಗಿ ಆರ್ಥಿಕವಾಗಿ ಸಹ ಬಹಳಷ್ಟು ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಆಗಾಗ್ಗೆ ತೀವ್ರಅನಾರೋಗ್ಯಕ್ಕೊಳಗಾಗುತ್ತಿದ್ದ ಶ್ರೀಯುತರು ಕಾಯಿಲೆಯಿಂದಾಗಿಯೇ ಕೊನೆಯುಸಿರೆಳೆದರು. ಪತ್ನಿ, ಪುತ್ರಿ ಮತ್ತು ಇಬ್ಬರು ಮಕ್ಕಳನ್ನು ಹೊಂದಿರುವ ಕಾಂ. ಸೀತಾಪತಿಯವರ ನಿಧನದಿಂದ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ.

ಈ ಸಂದರ್ಭದಲ್ಲಿ ಪಕ್ಷದ ಹರಿಹರ ಶಾಖೆ ಹಾಗೂ ರಾಜ್ಯಸಮಿತಿ ದಿವಂಗತರ ಕುಟುಂಬಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿವೆ ಹಾಗೂ ಶ್ರದ್ಧಾಂಜಲಿಯನ್ನು ಅರ್ಪಿಸುತ್ತವೆ.

○

ದಕ್ಷಿಣ ಆಫ್ರಿಕಾದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ

[ಹಿಂದಿನ ಸಂಚಿಕೆಯಿಂದ]

1950ರಲ್ಲಿ ವರ್ಣದ್ವೇಷ ನೀತಿಯ ವಿರುದ್ಧ ಬಲವಾದ ಚಳುವಳಿಗಳು ನಡೆದವು. ಕರಿಯರು, ಭಾರತೀಯರು, ವರ್ಣೀಯರು ಎಲ್ಲರೂ ಇದರಲ್ಲಿ ಭಾಗ ವಹಿಸಿದರು. ಭಯಭೀತಿಗೊಂಡ ಸರಕಾರ ಪೋಲೀಸ್ ದಬ್ಬಾಳಿಕೆಯ ಮೂಲಕ ವರ್ಣಭೇದದ ಕಾನೂನುಗಳನ್ನು ಮತ್ತಷ್ಟು ಬಿಗಿಗೊಳಿಸುವುದರ ಮೂಲಕ ಪ್ರತಿಕ್ರಿಯಿಸಿತು. 1952ರಲ್ಲಿ ಇನ್ನೂ ತೀವ್ರತರವಾದ "ನಿರಾಕರಣ ಚಳುವಳಿ"ಗಳು ನಡೆದವು. ಸರಕಾರ ಇದನ್ನು ಎದುರಿಸಲು ಎಮರ್ಜೆನ್ಸಿ ಅಧಿಕಾರವನ್ನು ಉಪಯೋಗಿಸಿತು. ವರ್ಣಭೇದ ಕಾನೂನುಗಳು ಇನ್ನಷ್ಟು ಬಿಗಿಯಾದವು.

ಹೋರಾಟದ ಹೊಸ ಘಟ್ಟ- ಸ್ವಾತಂತ್ರ್ಯ ಮಹಾ ಪತ್ರ

ಹೆಚ್ಚುತ್ತಿದ್ದ ದಬ್ಬಾಳಿಕೆ ವಿವಿಧ ಆಫ್ರಿಕನ್ ಬಣಗಳನ್ನು ಮಾತ್ರವಲ್ಲ ಶೋಷಣೆಗೊಳಗಾದ ಎಲ್ಲರನ್ನೂ ಒಂದೆಡೆ ತಂದಿತು. ಅದುವರೆಗೆ ಕೇವಲ ಆಫ್ರಿಕನ್ನರ ಪ್ರತಿಭಟನೆಯ ಸಂಘಟನೆಯಾಗಿದ್ದ ANC ಈಗ ಒಂದು ಸ್ಪಷ್ಟವಾದ ರಾಜಕೀಯ ಹಾಗೂ ಸೈದ್ಧಾಂತಿಕ ಆಧಾರವನ್ನು ರೂಪಿಸಕೊಳ್ಳಬೇಕೆಂಬುದು ವಿಮೋಚನಾ ಹೋರಾಟಗಾರರಿಗೆ ಅನ್ನಿಸಿತು. ಇವರ ಫಲವಾಗಿ 1955ರಲ್ಲಿ ದಕ್ಷಿಣ ಆಫ್ರಿಕಾದ ಜನತೆಯ ಮಹಾಸಮ್ಮೇಳನ ನಡೆದು ಒಂದು "ಸ್ವಾತಂತ್ರ್ಯ ಮಹಾಪತ್ರ"ವನ್ನು ಅಂಗೀಕರಿಸಲಾಯಿತು. ಇದು ANC ಯನ್ನು ಕಾರ್ಮಿಕರು, ಕೃಷಿಕೂಲಿಗಾರರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಕಮ್ಯುನಿಸ್ಟರು, ಇತರ ದೇಶಭಕ್ತರು, ಕರಿಯರು, ಭಾರತೀಯರು, ವರ್ಣೀಯರು ಹಾಗೂ ಪ್ರಜಾಪ್ರಭುತ್ವವಾದೀ ಬಿಳಿಯರು ಇವರೆಲ್ಲರ ಸಂಯುಕ್ತ ರಂಗವನ್ನಾಗಿ ಮಾರ್ಪಡಿಸಿತು.

"ದಕ್ಷಿಣ ಆಫ್ರಿಕಾ ಅದರಲ್ಲಿ ವಾಸಿಸುವ ಕರಿಯರಿಗೆ, ಬಿಳಿಯರಿಗೆ ಹಾಗೂ ಎಲ್ಲರಿಗೂ ಸೇರಿದೆ. ಜನತೆಯ ನಿರ್ಣಯಕ್ಕನುಸಾರವಾಗಿ ಇಲ್ಲದ ಯಾವ ಸರಕಾರವೂ ತನಗೆ ಅಧಿಕಾರವಿದೆಯೆಂದು ನ್ಯಾಯಬದ್ಧವಾಗಿ ಹೇಳಿಕೊಳ್ಳಲು ಸಾಧ್ಯವಿಲ್ಲ...... ನಾವು ಅಂದರೆ ಜನತೆ ಆಡಳಿತ ನಡೆಸುತ್ತೇವೆ" ಎಂದು ಸ್ವಾತಂತ್ರ್ಯ ಮಹಾಪತ್ರ ಘೋಷಿಸುತ್ತದೆ. ತಮ್ಮ ಹೋರಾಟಗಳ ಮೂಲಕ ಚರಿತ್ರೆಯನ್ನು ರೂಪಿಸುತ್ತೇವೆಂಬ ದೃಢನಿರ್ಧಾರವನ್ನು ದಕ್ಷಿಣ ಆಫ್ರಿಕಾದ ಶೋಷಿತ ಜನತೆ ಈ ಮಹಾಪತ್ರದ ಮೂಲಕ ಜಗತ್ತಿಗೆ ತಿಳಿಯಪಡಿಸಿದ್ದಾರೆ. "ಸ್ವಾತಂತ್ರ್ಯ ಮಹಾಪತ್ರ" ದಕ್ಷಿಣ ಆಫ್ರಿಕಾದ ಭವಿಷ್ಯದ ನೀಲನಕ್ಷೆ: ಅಲ್ಲಿಯ ಜನಸಾಮಾನ್ಯರ ಆಶೋತ್ತರಗಳ ದಾಖಲೆ. ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟ ಬಿಳಿಯರ ಜನಾಂಗದ್ವೇಷಿ ಸರಕಾರದ ಸ್ಥಾನದಲ್ಲಿ ಬಹುಸಂಖ್ಯಾತ ಕರಿಯರ ಜನಾಂಗದ್ವೇಷೀ ಸರಕಾರವನ್ನು ಸ್ಥಾಪಿಸುವುದಕ್ಕಲ್ಲ. ಈ ಹೋರಾಟ ಮೂಲಭೂತವಾಗಿ ವಸಾಹತುಶಾಹೀ ವಿರೋಧೀ, ಜನಾಂಗದ್ವೇಷವಿರೋಧಿ ಹಾಗೂ ಸಾಮ್ರಾಜ್ಯಶಾಹಿ ವಿರೋಧೀ ಹೋರಾಟ ಎಂಬುದನ್ನು ಈ ಮಹಾಪತ್ರ ಸ್ಪಷ್ಟಪಡಿಸುತ್ತದೆ. ದಕ್ಷಿಣ ಆಫ್ರಿಕಾದ ಸದ್ಯದ ಹಂತವೆಂದರೆ ವಸಾಹತುಶಾಹಿಯಿಂದ ಕರಿಯರ ರಾಷ್ಟ್ರೀಯ ವಿಮೋಚನೆ; ಶೋಷಣಾರಹಿತ ಸಮಾಜದ ಸ್ಥಾಪನೆಯ ಕಡೆಗೊಯ್ಯುವ ಹಂತಗಳಲ್ಲಿ ಒಂದು. ಈ ಅರ್ಥದಲ್ಲಿ ದಕ್ಷಿಣ ಆಫ್ರಿಕಾದ ಕ್ರಾಂತಿ ಆಫ್ರಿಕಾ ಖಂಡದ ಕ್ರಾಂತಿಯ ಅಭಿನ್ನ ಅಂಗ. 'ಮಾಯಿಬುಯ್ ಇ ಆಫ್ರಿಕಾ'ಅಂದರೆ 'ಆಫ್ರಿಕಾವನ್ನು ನಮಗೆ ಹಿಂದಿರುಗಿಸಲೇಬೇಕು' ಎಂಬುದು ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದ ಆರಂಭದಿಂದಲೂ ಕೇಳಿಬರುತ್ತಿದ್ದ ಘೋಷಣೆ.

ಹೋರಾಟ ತೀವ್ರ ಸ್ವರೂಪ ಪಡೆಯುತ್ತಿದ್ದರೂ ತನ್ನ ಅಮಾನುಷ ಧೋರಣೆಗಳನ್ನು ಮರುಪರಿಶೀಲಿಸುವ ಬದಲು ಬಿಳಿಯ ಸರಕಾರ ದಮನ ಕ್ರಮಗಳನ್ನು ಮತ್ತಷ್ಟು ಹೆಚ್ಚಿಸಿತು. 1960ರ ದಶಕದ ಆರಂಭದಲ್ಲಿ ವರ್ಣದ್ವೇಷ ನೀತಿಯಿಂದ ರೋಸಿಹೋದ ಜನತೆ ಅಲ್ಲಲ್ಲಿ ಜೀದಿಗಿಳಿದು ತಮ್ಮ ಅಸಹನೆ, ಕ್ರೋಧವನ್ನು ಪ್ರದರ್ಶಿಸಲಾರಂಭಿಸಿದರು. ಶಾರ್ಪ್‌ವಿಲೆಯೆಂಬಲ್ಲಿ ನಡೆದ ಇಂತಹ ಒಂದು ಶಾಂತಿಯುತ ಪ್ರದರ್ಶನದಲ್ಲಿ ಪೋಲೀಸರು ಅನಗತ್ಯವಾಗಿ ಗುಂಡಿನ ಸುರಿಮಳೆ ಸುರಿಸಿ 67 ಜನರನ್ನು ಕೊಲೆಮಾಡಿದರು. 180ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ವಿಮೋಚನಾ ಹೋರಾಟಗಳ ಜನಪ್ರಿಯತೆ ಈ ರೀತಿ ಹೆಚ್ಚುತ್ತಿರುವುದನ್ನು ಕಂಡು ಭಯಗೊಂಡ ಸರಕಾರ A.N.C ಹಾಗೂ ಇತರ ವಿಮೋಚನಾ ಸಂಘಟನೆಗಳ ಕಾರ್ಯಚಟುವಟಿಕೆಗಳನ್ನು ನಿಷೇಧಿಸಿತು. ಹೋರಾಟಗಾರರ ಮೇಲೆ ಫ್ಯಾಸಿಸ್ಟ್ ಹಿಂಸಾಚಾರ ನಡೆಸಿತು. ಪರಿಣಾಮವಾಗಿ ಅದುವರೆಗೆ ಶಾಂತಿಯುತ ವಿಧಾನಗಳಿಂದ ಹೋರಾಡುತ್ತಿದ್ದ ANC ನಿರ್ವಾಹವಿಲ್ಲದೆ ಸಶಸ್ತ್ರ ಹೋರಾಟದ ಮಾರ್ಗಹಿಡಿಯಬೇಕಾಯಿತು. ANC.ಯ ಸೇನಾ ವಿಭಾಗ 'ಉಮ್‌ಕೋಂಟೋ ವಿಸಿಜ್ವೆ' ಅಥವಾ 'ರಾಷ್ಟ್ರದ ಈಟಿ' ಜನ್ಮತಾಳಿತು. ಇದು ದಕ್ಷಿಣ ಆಫ್ರಿಕನ್ನರ ಜನತಾ ಮುಕ್ತಿ ಸೇನೆ. ಈ ಸೇನೆ ಹಲವು ಉತ್ಸಾಹೀ ನವಯುವಕರನ್ನು ತನ್ನೆಡೆಗೆ ಆಕರ್ಷಿಸಿತು. ಗುಪ್ತ ಸಶಸ್ತ್ರ ಹೋರಾಟದ ನಾಯಕ ಮ್ಯಾಂಡೆಲಾರವರನ್ನು ಬಂಧಿಸಿ ಅಜೀವ ಕಾರಾಗೃಹವಾಸ ಶಿಕ್ಷೆ ವಿಧಿಸಿದರೂ ಹೋರಾಟಗಾರರು ಧೃತಿಗೆಡಲಿಲ್ಲ. 1976ರಲ್ಲಿ ಸೋವೆಟೋ ಎಂಬಲ್ಲಿ ಪ್ರಾರಂಭವಾಗಿ ದೇಶವನ್ನೆಲ್ಲಾ ವ್ಯಾಪಿಸಿದ ಬೃಹತ್ ಪ್ರಮಾಣದ ಮತಪ್ರದರ್ಶನಗಳೇ ಇದಕ್ಕೆ ಸಾಕ್ಷಿ. 1976ರ ಮೇ ತಿಂಗಳಲ್ಲಿ ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲ್ ಪ್ರದೇಶದ ಆಡಳಿತಗಾರರು ಆಫ್ರಿಕಾದ ಶಾಲೆಗಳಲ್ಲಿ ಆಫ್ರಿಕಾನ್ಸ್ ಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ಆಜ್ಞೆ ಹೊರಡಿಸಿದರು. ಈ ಆಫ್ರಿಕಾನ್ಸ್ ಬಿಳಿಯ ಅಲ್ಪಸಂಖ್ಯಾತರಲ್ಲಿ 60% ರಷ್ಟು ಬಿಳಿಯರು ಮಾತನಾಡುವ ಭಾಷೆ. ವರ್ಣದ್ವೇಷ ನೀತಿಯ ಇತರ ಕಾನೂನುಗಳಿಗೆ ಹೋಲಿಸಿದರೆ ಇದು ಸಾಧುವಾದ ಆಜ್ಞೆಯಾಗಿತ್ತು. ಆದರೂ ಒಳಗೊಳಗೇ ಕುದಿಯುತ್ತಿದ್ದ ಕ್ರೋಧ ಭುಗಿಲೆನ್ನಲು ಇಷ್ಟು ಸಾಕಾಯಿತು. ಜೋಹಾನ್ಸ್‌ಬರ್ಗ್‌ನ ಸಮೀಪವಿರುವ ಸಣ್ಣ ಪಟ್ಟಣ ಸೋವೆಟೋದಲ್ಲಿ ಹಿಂದೆಂದೂ ಕಾಣದಷ್ಟು ದೊಡ್ಡ ಪ್ರಮಾಣದಲ್ಲಿ ಮತಪ್ರದರ್ಶನ ನಡೆಯಿತು. ಇದರ ವಿಶೇಷತೆಯೆಂದರೆ ಅದರಲ್ಲಿ ಭಾಗವಹಿಸಿದವರು ಇನ್ನೂ ಎಳೆಯ ಪ್ರಾಯದ ಶಾಲೆಗೆ ಹೋಗುವ ವಯಸ್ಸಿನ ಹುಡುಗ, ಹುಡುಗಿಯರು.



ಎ. ಎನ್. ಸಿ. ಚಿನ್ಹೆ

"ದೇಶದ ಹೊಚ್ಚಹೊಸ ಪೀಳಿಗೆ ತಮ್ಮ ದೇಶದ ಭವಿಷ್ಯದ ಬಗ್ಗೆ ತಮ್ಮ ಭಾವನೆಯೇನಿದೆಯೆಂಬುದನ್ನು ಧೈರ್ಯವಾಗಿ, ಸ್ಪಷ್ಟವಾಗಿ ತೋರಿಸಿಕೊಟ್ಟಿದೆ" ಎಂದು ಒಬ್ಬ ಲೇಖಕರು ಇದನ್ನು ವರ್ಣಿಸಿದ್ದಾರೆ. ಯಥಾಪ್ರಕಾರ ಪೋಲೀಸರು ಗೋಲೀಬಾರು ನಡೆಸಿದರು. ಅಧಿಕೃತವಾಗಿ 174 ಆಫ್ರಿಕನ್ ವಿದ್ಯಾರ್ಥಿಗಳು ಬಲಿಯಾದರು. ಅನಧಿಕೃತ ಸಂಖ್ಯೆ ಇನ್ನೂ ಹೆಚ್ಚಿದೆ. ಆದರೂ ಪ್ರತಿಭಟನೆ ನಿಲ್ಲಲಿಲ್ಲ. ಅದು ಒಂದು ಪಟ್ಟಣದಿಂದ ಇನ್ನೊಂದಕ್ಕೆ ಹರಡುತ್ತಾ ಹೋಯಿತು. ಶಾಲೆಗಳನ್ನು ಸುಡಲಾಯಿತು; ತರಗತಿಗಳು ಖಾಲಿಯಾದವು; ಬಿಳಿಯರಿಗೆ ಹತ್ತಿರ ಬರಲೂ ಅವಕಾಶದೊರೆಯಲಿಲ್ಲ. ಮೇ 1976ರ ನಂತರ ಪ್ರತಿದಿನ ಪ್ರತಿಭಟನೆಯ, ಕ್ರೋಧದ ನಿರ್ಘೋಷ ದ. ಆಫ್ರಿಕಾದ ಎಲ್ಲೆಲ್ಲೂ ಮೊಳಗಲಾರಂಭಿಸಿದೆ.

ಕಾರ್ಮಿಕವರ್ಗ ಮತ್ತು ವಿಮೋಚನಾ ಹೋರಾಟ

ರಾಷ್ಟ್ರೀಯ ಭಾವನೆ ಸಾಮಾನ್ಯವಾಗಿ ವರ್ಗಸಮಾಜದಲ್ಲಿ ವರ್ಗಶೋಷಣೆಯ ಪರೋಕ್ಷ ಪರಿಣಾಮವಾಗಿ ಕಂಡುಬರುತ್ತದೆ. ವರ್ಗಶೋಷಣೆಯನ್ನು ಮರೆಮಾಚಲು ಇದನ್ನು ಉಪಯೋಗಿಸಲಾಗುತ್ತದೆ. ಆದರೆ ಎಲ್ಲಾ ಸಂದರ್ಭಗಳಲ್ಲೂ ನಿಜವಲ್ಲ. ದಕ್ಷಿಣ ಆಫ್ರಿಕಾದ ಇತಿಹಾಸವನ್ನು ಗಮನಿಸಿದರೆ ರಾಷ್ಟ್ರೀಯ ಭಾವನೆ ಹಾಗೂ ಸಮಾಜವಾದ ಪ್ರತ್ಯೇಕವಾಗಿ ಬೆಳೆಯಲು ಸಾಧ್ಯವಿರಲಿಲ್ಲ. ದಕ್ಷಿಣ ಆಫ್ರಿಕಾದ ಬಂಡವಾಳಶಾಹೀ ಕಾರ್ಮಿಕ ವರ್ಗವನ್ನು ನಿರ್ಮಿಸಿತು. ಬಂಡವಾಳಶಾಹೀ ಬೆಳವಣಿಗೆ ಕಾರ್ಮಿಕ ಸಂಘಟನೆಗಳಿಗೆ, ಕಾರ್ಮಿಕವರ್ಗದ ರಾಜಕೀಯ ಪಕ್ಷದ ಉದಯಕ್ಕೆ ಕಾರಣವಾಯಿತು. ಇದೇ ಬಂಡವಾಳಶಾಹಿ ರಾಷ್ಟ್ರೀಯ ಭಾವನೆ ಹುಟ್ಟಿ ಬೆಳೆಯಲೂ ಕಾರಣವಾಯಿತು.

ಎಲ್ಲಾ ಬೂರ್ಜ್ವಾ ಸಮಾಜಗಳಂತೆ ದಕ್ಷಿಣ ಆಫ್ರಿಕಾದಲ್ಲೂ ಪ್ರಾರಂಭದಲ್ಲಿ ಬಂಡವಾಳಶಾಹೀವರ್ಗ ಹಾಗೂ ಕಾರ್ಮಿಕವರ್ಗದ ನಡುವೆ ಬಣ್ಣ, ಜನಾಂಗದ ಭೇದವಿಲ್ಲದೆ ಹೋರಾಟ ನಡೆಯಿತು. 1880 ರಿಂದ 1922ರ ನಡುವೆ ಬಿಳಿಯ ಕಾರ್ಮಿಕರು ಹಾಗೂ ಬಂಡವಾಳಶಾಹಿಗಳು ಮತ್ತು ಅವರ ಸರ್ಕಾರದ ನಡುವೆ ತೀವ್ರ ಸಮರವೇ ನಡೆಯಿತು. 1922ರಲ್ಲಿ ಬಿಳಿಯ ಗಣಿಕಾರ್ಮಿಕರ ಮುಷ್ಕರದ ವಿರುದ್ಧ ಬಿಳಿಯ ಸರ್ಕಾರ ಲಷ್ಕರೀ ಕಾನೂನುಗಳನ್ನೂ ಬಳಸಿತು. ಬಹಳ ರಕ್ತಪಾತವಾಯಿತು. ಆದರೆ ಬಿಳಿಯ ಕಾರ್ಮಿಕರು ದಕ್ಷಿಣ ಆಫ್ರಿಕಾದ ಎಲ್ಲಾ ಕಾರ್ಮಿಕರ ಪರವಾಗಿ ಹೋರಾಡಿರಲಿಲ್ಲ. ತಮಗೆ ಮಾತ್ರ ಕೆಲವು 'ಸೌಮ್ಯ' ಉದ್ಯೋಗಗಳನ್ನು 'ನಾಗರಿಕ' ಕನಿಷ್ಟ ವೇತನ ನಿರ್ಧರಿಸಿ ಮೀಸಲಿಡಬೇಕು ಎಂಬುದೇ ಅವರ ಕೇಳಿಕೆಯಾಗಿತ್ತು. 1922ರ ಮುಷ್ಕರದ ನಂತರ ಅವರ ಈ ಕೇಳಿಕೆ ಸ್ವೀಕರಿಸಲ್ಪಟ್ಟಿತು. ಆದರೆ ಅದಕ್ಕೆ ಬದಲಾಗಿ ಈ ಬಿಳಿಯ ಕಾರ್ಮಿಕರು ತಮ್ಮ ಟ್ರೇಡ್ ಯೂನಿಯನ್ ಹಕ್ಕುಗಳನ್ನೇ ಬಿಟ್ಟುಕೊಟ್ಟರು. 1923 ರಲ್ಲಿ ಅಪ್ರೆಂಟಿಸ್‌ಶಿಪ್ ಕಾಯ್ದೆ, 1924 ರಲ್ಲಿ ಕೈಗಾರಿಕಾ ಮಧ್ಯಸ್ಥಿಕೆಯ ಕಾಯ್ದೆ ಹಾಗೂ 1925ರಲ್ಲಿ ವೇತನ ಕಾಯ್ದೆಯನ್ನು ಸರ್ಕಾರ ಜಾರಿಗೊಳಿಸಿತು. ಮೊದಲ ಕಾಯ್ದೆ ಪ್ರಕಾರ ಕರಿಯ ಕಾರ್ಮಿಕನಿಗೆ ಅಪ್ರೆಂಟಿಸ್ ಆಗಿ ತರಬೇತಿ ಪಡೆಯಲು ಅವಕಾಶವಿರಲಿಲ್ಲ. ಎರಡನೇ ಕಾನೂನು ಬಿಳಿಯರಿಗೆ ಕೆಲವು ಉದ್ಯೋಗಗಳನ್ನು ಮೀಸಲಿಟ್ಟಿತು ಹಾಗೂ ಬಿಳಿಯ ಕಾರ್ಮಿಕರ ಟ್ರೇಡ್‌ಯೂನಿಯನ್‌ಗಳಿಗೆ ಮಾತ್ರ ಕಾನೂನುಬದ್ಧ ಸ್ಥಾನ ಕೊಟ್ಟಿತು. ಮೂರನೇ ಕಾಯ್ದೆ ಕನಿಷ್ಠ ವೇತನ ನಿರ್ಧರಿಸುವ ಹಕ್ಕನ್ನು ಸರ್ಕಾರಕ್ಕೆ ಕೊಟ್ಟಿತು. ಇದೂ ಕರಿಯ ಕಾರ್ಮಿಕರಿಗೆ ಅನ್ವಯಿಸುವುದಿಲ್ಲ. ಈ ರೀತಿ ಬಿಳಿಯ ಕಾರ್ಮಿಕರು ಕರಿಯ ಜನಾಂಗದ ತಮ್ಮ ಬಾಂಧವರನ್ನು ಅತೀ ಲಾಭ ಪಡೆಯಬೇಕೆನ್ನುವ ಮಾಲೀಕರು ಹಾಗೂ ಸದಾ ಬಂದೂಕನ್ನು ಗುರಿಮಾಡಿಟ್ಟುಕೊಂಡ ಪೋಲೀಸರ ನಡುವೆ ಒದ್ದಾಡಲು ಬಿಟ್ಟುಬಿಟ್ಟರು. ಹೀಗೆ ಬಿಳಿಯ ಕಾರ್ಮಿಕರು ವರ್ಣದ್ವೇಷ ನೀತಿಯ ಶೋಷಣಾಮಯ ವ್ಯವಸ್ಥೆಯೊಡನೆ ರಾಜಿ ಮಾಡಿಕೊಂಡ ಮೇಲೆ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಕೇವಲ ಕರಿಯ ಜನಾಂಗದ ಕಾರ್ಮಿಕರ ಪಕ್ಷವಾಯಿತು.

ದಕ್ಷಿಣ ಆಫ್ರಿಕಾದಲ್ಲಿ ಒಬ್ಬ ಕರಿಯ ಕಾರ್ಮಿಕ ಎರಡು ರೀತಿಯ ಶೋಷಣೆಗೆ ಒಳಪಟ್ಟಿದ್ದಾನೆ-ಕಾರ್ಮಿಕನಾಗಿ ವರ್ಗಶೋಷಣೆಗೆ ಹಾಗೂ ಕರಿಯ ಜನಾಂಗದವನಾಗಿ ರಾಷ್ಟ್ರೀಯ ಶೋಷಣೆಗೆ. ಆದ್ದರಿಂದ ಒಬ್ಬ ಕರಿಯ ಕಾರ್ಮಿಕನಿಗೆ ರಾಷ್ಟ್ರೀಯ ವಿಮೋಚನಾ ಹೋರಾಟವೂ ತನ್ನ ಜೀವನದ ಹೋರಾಟದ ಅಭಿನ್ನ ಅಂಗವಾಗಿದೆ. ಇದನ್ನು ಗಮನಿಸಿಯೇ ಕಮ್ಯುನಿಸ್ಟ್ ಪಕ್ಷ ಇತ್ತೀಚೆಗೆ ಗುಪ್ತವಾಗಿ ಹೊರಡಿಸಿದ ಸುತ್ತೋಲೆಯಲ್ಲಿ "ಬಿಳಿಯರ ಅಮಾನುಷ ದಬ್ಬಾಳಿಕೆಯನ್ನು ಕೊನೆಗಾಣಿಸಬೇಕಾದರೆ ಅದರ ಆಧಾರವಾದ ಬಂಡವಾಳಶಾಹಿಯನ್ನೇ ಧ್ವಂಸಗೊಳಿಸಬೇಕು. ಆದರೆ ತಕ್ಷಣ ಕಾರ್ಮಿಕರು ಹಾಗೂ ಇತರ ದಲಿತ ಜನರು ಮಾಡಬೇಕಾದ ಕೆಲಸವೆಂದರೆ ಬಿಳಿಯ ಅಲ್ಪಸಂಖ್ಯಾತರ ದಬ್ಬಾಳಿಕೆಯನ್ನು ನಾಶಪಡಿಸುವುದು. ಆದ್ದರಿಂದಲೇ ಕಾರ್ಮಿಕರು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ನೇತೃತ್ವದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ಬೆಂಬಲ ಕೊಡುತ್ತಾರೆ ಹಾಗೂ ಅದರಲ್ಲಿ ಭಾಗವಹಿಸುತ್ತಾರೆ" ಎಂದಿದೆ. ಕರಿಯ ಕಾರ್ಮಿಕರ ಸಂಘಟನೆಗಳು ಹೆಚ್ಚೆಚ್ಚು ಸಂಖ್ಯೆಯಲ್ಲಿ ಆರ್ಥಿಕ,ರಾಜಕೀಯ ಹೋರಾಟಗಳನ್ನು ನಡೆಸಿವೆ. ಸಂಘಟನೆಗಳು ಶಕ್ತಿಶಾಲಿಯಾಗುತ್ತಿವೆ. 1955ರಲ್ಲಿ ಹುಟ್ಟಿದ ದಕ್ಷಿಣ ಆಫ್ರಿಕಾದ ಟ್ರೇಡ್‌ಯೂನಿಯನ್ ಕಾಂಗ್ರೆಸ್ 60,000 ಕರಿಯ ಕಾರ್ಮಿಕರ ಸದಸ್ಯತ್ವಹೊಂದಿದ್ದು ಎ.ಎನ್.ಸಿ.ಯೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದೆ. ಅಲ್ಲದೆ ವಿಮೋಚನಾ ಹೋರಾಟದಲ್ಲಿ ಭಾಗವಹಿಸುತ್ತಿರುವ ಎಲ್ಲರೂ ಮುಕ್ತಿಹೋರಾಟದಲ್ಲಿ ಕಾರ್ಮಿಕವರ್ಗದ ನಾಯಕತ್ವವನ್ನು ಒಪ್ಪಿಕೊಂಡಿದ್ದಾರೆ. ಈಗ ಎ. ಎನ್. ಸಿ. ಯ ಜನತಾ ಸೇನೆಯ ಯುವಕ ಗೆರಿಲ್ಲಾಗಳು ಒಂದೆಡೆ ದಕ್ಷಿಣ ಆಫ್ರಿಕಾ ರಕ್ಷಣಾ ಹಾಗೂ ದಕ್ಷಿಣ ಆಫ್ರಿಕಾ ಪೋಲೀಸ್ ಪಡೆಗಳಿಗೆ ಚಳ್ಳೆಹಣ್ಣು ತಿನ್ನಿಸುವುದು ಮಾತ್ರವಲ್ಲದೆ ಕೈಗಾರಿಕಾ ಸ್ಥಾವರಗಳ ಮೇಲೆ ದಾಳಿಮಾಡಿ ಬಿಳಿಯ ಅಲ್ಪಸಂಖ್ಯಾತರ ಲಾಭದ ಮೂಲವನ್ನು ನಷ್ಟಗೊಳಿಸುತ್ತಿದ್ದರೆ ಇನ್ನೊಂದೆಡೆ ಕರಿಯ ಕಾರ್ಮಿಕರು ತಮ್ಮ ಪ್ರಬಲ ಅಸ್ತ್ರವಾದ ಮುಷ್ಕರಗಳ ಮೂಲಕ ಅಗ್ಗದ ಶ್ರಮಶಕ್ತಿಯ ಆಧಾರದ ಮೇಲೆ ನಿಂತಿರುವ ದಕ್ಷಿಣ ಆಫ್ರಿಕಾದ ಆರ್ಥಿಕ ವ್ಯವಸ್ಥೆಗೆ ಸವಾಲು ಹಾಕುತ್ತಿದ್ದಾರೆ.

[ಮುಂದುವರೆಯುವುದು]

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದೆ. ಅವರು ಆಮದಿನ ಮೇಲೆ ನಿಯಂತ್ರಣ ಹೇರುತ್ತಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ರಾಷ್ಟ್ರಗಳಲ್ಲಿಯೂ ಇದೇ ಸಮಸ್ಯೆ. ಮೇಲಾಗಿ ಪೆಟ್ರೋಲ್ ಧಾರಣೆ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುತ್ತಲೇ ಇದೆ. ನಮ್ಮ ಒಟ್ಟು ರೂ. 11,000 ಕೋಟಿಯ ಆಮದಿನಲ್ಲಿ ಪೆಟ್ರೋಲಿಗೆ ರೂ. 5000 ಕೋಟಿಯಾಗಿದೆ. ಸರಕಾರ ಇತರ ಇಂಧನಗಳ ಬಳಕೆಯನ್ನು ಹೆಚ್ಚಿಸುವುದರಲ್ಲಿ ಸಂಪೂರ್ಣ ಸೋತಿದೆ. ವಿದೇಶಿ ವಿನಿಮಯ ಗಳಿಕೆಯೂ ಈಗ ಕಡಿಮೆಯಾಗುತ್ತಿದೆ. 1960ರ ದಶಕದಲ್ಲಿ ಸಂಭವಿಸಿದ ತೀವ್ರ ವಿದೇಶಿ ವಿನಿಮಯ ಕೊರತೆಯ ಬಿಕ್ಕಟ್ಟು ಬರಲಿದೆ. ಇದರಿಂದ ಪಾರಾಗಲು ಹೇಗೆ ಸಾಧ್ಯ? ಪುನಃ ವಿದೇಶಿ ನೆರವು,ವಿದೇಶಿ ಬಂಡವಾಳಕ್ಕೇ ಮೊರೆಹೋಗಬೇಕು. ಸ್ವಾವಲಂಬನೆಯನ್ನು ಕೈ ಬಿಡಬೇಕು. ಅಂದರೆ ನಮ್ಮ ದೇಶದ ಹಿತಾಸಕ್ತಿಗಳನ್ನು ವಿದೇಶಿ ಬಂಡವಾಳಗಾರರಿಗೆ ಒತ್ತೆ ಇಟ್ಟಂತಾಗುವುದು. ಇಂದಿರಾ ಸರ್ಕಾರ ದೇಶವನ್ನು ಈ ವಿಪತ್ತಿನಿಂದ ಪಾರು ಮಾಡಲಾರದು. ಇದು ಸ್ಪಷ್ಟ.

ಕೊರತೆಹಣ ಸೃಷ್ಟಿ :

1980-81ರ ಕೇಂದ್ರ ಮುಂಗಡ ಪತ್ರದಲ್ಲಿ ರೂ. 1400 ಕೋಟಿ ಕೊರತೆ ತೋರಿಸಲಾಗಿತ್ತು. ಅರ್ಥ ಮಂತ್ರಿ ವೆಂಕಟ್‌ರಾಮನ್ ಆಗ ಹೇಳಿದ್ದರು. ಕೊರತೆಹಣ ಈ ಮೊತ್ತಕ್ಕಿಂತ ಹೆಚ್ಚಾದರೆ ತಾನು ಮಂತ್ರಿಪದವಿಗೆ ರಾಜಿನಾಮೆ ಕೊಡುವೆನೆಂದು. ಡಿಸೆಂಬರ್ 80ರಷ್ಟರಲ್ಲಿಯೇ ಕೊರತೆಹಣ ರೂ. 2000 ಕೋಟಿಗಿಂತಲೂ ಹೆಚ್ಚಿದೆ. ಅರ್ಥ ಮಂತ್ರಿ ಏನು ಹೇಳುತ್ತಾರೆ ? ಲೋಕದಳ ಸರ್ಕಾರದ 1979-80ರ ವರ್ಷಾಂತ್ಯದಲ್ಲಿ ಕೊರತೆಹಣ ರೂ. 2700 ಕೋಟಿಯಷ್ಟಾಗಿತ್ತು, 1980-81ರಲ್ಲಿ ಕೊರತೆಹಣ ಈ ಮೊತ್ತವನ್ನು ಮೀರಲಾರದು ಎನ್ನುತ್ತಾರೆ ಮಂತ್ರಿ ಮಹಾಶಯರು. ಆದರೆ, ಮುಂದಿನ ಮಾರ್ಚ್ ಅಂತ್ಯದಲ್ಲಿ ಕೊರತೆಹಣ ಸೃಷ್ಟಿ ರೂ. 3000 ಕೋಟಿಗೂ ಮೀರುವುದರಲ್ಲಿ ಸಂಶಯವಿಲ್ಲ. ಆಗ ಮಂತ್ರಿ ಏನು ಹೇಳುವರೋ ?

1980ರ ಒಂದು ವರ್ಷದ ಆಳ್ವಿಕೆಯಲ್ಲಿ ಬೆಲೆಗಳು ಮತ್ತಷ್ಟೂ ಏರಿದವು, ಉತ್ಪಾದನೆ ನಿರೀಕ್ಷಿಸಿದಷ್ಟು ಆಗಲಿಲ್ಲ, ವಿತರಣಾ ವ್ಯವಸ್ಥೆ ತೀರ ಅಸ್ತವ್ಯಸ್ತವಾಗಿದ್ದುದರಿಂದ ಜೀವನಾವಶ್ಯಕ ವಸ್ತುಗಳ ಕೊರತೆಯಿಂದಾಗಿ ಜನರಲ್ಲಿ ಹಾಹಾಕಾರ ಎದ್ದಿತು. ವಿದೇಶಿ ವ್ಯಾಪಾರದಲ್ಲಿ ಕೊರತೆ, ಮುಂಗಡಪತ್ರದಲ್ಲಿ ಕೊರತೆ ಹೆಚ್ಚಿದವು. ಹೊಸ ಉದ್ಯಮದಲ್ಲಿ ಬಂಡವಾಳ ಹೂಡಿಕೆ ಸ್ಥಗಿತಗೊಂಡಿತು. ನಿರುದ್ಯೋಗ 1.5 ಕೋಟಿ ರೂ. ಮೀರಿತು. ಎಲ್ಲಾ ವರ್ಗದ ಜನರು ಹೋರಾಟದ ಹಾದಿ ಹಿಡಿದಿದ್ದಾರೆ. ಮುಂದಿನ ವರ್ಷದಲ್ಲಿ ಆರ್ಥಿಕ ಬಿಕ್ಕಟ್ಟು ಇನ್ನಷ್ಟೂ ತೀವ್ರಗೊಳ್ಳಲಿದೆ. ಜನರ ಹೋರಾಟ ಹರಿತಗೊಳ್ಳಲಿದೆ.

○

ಉಡುಪಿ ಡಿವಿಜನಿನ ಹಂಚಿನ ಮಜೂರರ ಹೋರಾಟಕ್ಕೆ ಸಿದ್ಧತೆ

ಉಡುಪಿ ಡಿವಿಜನ್ ಹಂಚಿನ ಮಜೂರರ ಪ್ರತಿನಿಧಿ ಸಭೆಯು ತಾ. 18-1-81ರಂದು ಉಡುಪಿಯಲ್ಲಿ ಸೌತ್ ಕೆನರಾ ಟ್ಯಾಲ್ ವರ್ಕರ್ಸ್ ಯೂನಿಯನಿನ ಉಪಾಧ್ಯಕ್ಷರಾದ ಕಾಂ. ಬಿ. ನಾರಾಯಣರ ಅಧ್ಯಕ್ಷತೆಯಲ್ಲಿ ಜರಗಿತು. ಭಾರತ್ ಟ್ಯಾಲ್ ವರ್ಕ್ಸ್, ನವಜೀವನ್ ಟ್ಯಾಲ್ ವರ್ಕ್ಸ್, ಜಯಂತಿ ಟ್ಯಾಲ್ ವರ್ಕ್ಸ್, ಹಂಗಾರಕಟ್ಟೆ ಮತ್ತು ಮಡಿ ಟ್ಯಾಲ್ ವರ್ಕ್ಸ್ ಮೊದಲಾದ ಕಾರ್ಖಾನೆಗಳಿಂದ ಮಜೂರ ಪ್ರತಿನಿಧಿಗಳು ಭಾಗವಹಿಸಿದರು. ಈ ಕಾರ್ಖಾನೆಗಳಲ್ಲಿ ಒಪ್ಪಂದವು ಕೊನೆಯಾಗಿದ್ದು ಈಗಾಗಲೇ ಮಾಲಕರ ಮುಂದೆ ಕೇಳಿಕೆಗಳನ್ನು ಇಡಲಾಗಿದೆ. ತಿಂಗಳು ಎರಡು ಕಳೆದರೂ ಇನ್ನ ಇತ್ಯರ್ಥವಾಗದಿರುವುದರಿಂದ ಇದನ್ನ ಪಡೆಯುವವರೆಗೆ ಹೋರಾಟ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಜಿಲ್ಲಾ ಸಿ.ಐ.ಟಿ.ಯು. ಸಮಿತಿ ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ ಜೊತೆ ಕಾರ್ಯದರ್ಶಿ ಕಾಂ. ಕೆ. ಶಂಕರ, ಟ್ಯಾಲ್ ವರ್ಕರ್ಸ್ ಯೂನಿಯನ್ ಕಾರ್ಯಕಾರಿ ಸಮಿತಿ ಸದಸ್ಯರಾದ ಕಾಂ. ಡಿ. ಗೋಪಾಲ ಮಾತನಾಡಿ ಮಜೂರರ ಮುಂದಿರುವ ಸಮಸ್ಯೆಗಳನ್ನು ವಿವರಿಸಿದರು. ಪ್ರಥಮದಲ್ಲಿ ಕಾಂ. ಅಬ್ರಹಾಂ ಕರ್ಕಡರು ಸ್ವಾಗತಿಸಿದರು. ಹೋರಾಟ ನಡೆಸುವುದಕ್ಕೆ ಬೇಕಾದ ಒಂದು ಕ್ರಿಯಾಸಮಿತಿಯನ್ನ ರಚಿಸಲಾಗಿದೆ.

●

ಎಸ್.ಎಫ್.ಐ. ಸಮ್ಮೇಳನದ ನಿರ್ಣಯಗಳು

ರಾಜ್ಯದ ವಿದ್ಯಾರ್ಥಿಗಳು ಇಂದು ಶೈಕ್ಷಣಿಕ ರಂಗದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ಸಮ್ಮೇಳನವು ಈ ಕೆಳಗಿನ ಶೈಕ್ಷಣಿಕ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿತು.

1) ಡಾ. ರಾಜ್ ಆಯೋಗದ ವರದಿಯ ಪ್ರಕಾರ ಇನ್ನು ಮುಂದೆ ಡೊನೇಷನ್, ಕ್ಯಾಪಿಟೇಷನ್ ಫೀ ಆಧಾರದಲ್ಲಿ ಯಾವುದೇ ಖಾಸಗಿ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಕೂಡದು.

2) ಡೊನೇಷನ್ ಫೀಯನ್ನು ಸಂಪೂರ್ಣ ರದ್ದುಪಡಿಸಬೇಕು. ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಸರ್ಕಾರಿ ಶಾಲಾ ಕಾಲೇಜುಗಳಷ್ಟೆ ಶಿಕ್ಷಣ ಶುಲ್ಕವನ್ನು ನಿಗಧಿಪಡಿಸಬೇಕು. ಬರಗಾಲ ಪೀಡಿತ ಜಿಲ್ಲೆಯ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕದ ಸಂಪೂರ್ಣ ವಿನಾಯಿತಿ ನೀಡಬೇಕು.

3) ಸಂಸ್ಕೃತವನ್ನು ಪ್ರಥಮ ಭಾಷೆಯ ಸ್ಥಾನದಿಂದ ತೆಗೆದುಹಾಕಿ ಐಚ್ಛಿಕ ವಿಷಯವನ್ನಾಗಿ ಮಾಡಬೇಕು.

4) ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಕನಿಷ್ಠ 'ಕಲಾ' (ಆರ್ಟ್ಸ್) ಕನ್ನಡ ವಿಭಾಗವನ್ನು ಖಡ್ಡಾಯವಾಗಿ ಪ್ರಾರಂಭಿಸಬೇಕು.

5) ಪಿ.ಯು.ಸಿ. ಪ್ರಥಮ ವರ್ಷದಲ್ಲಿ ಪರೀಕ್ಷೆ ನಡೆಸಬೇಕು.

6) ಪರೀಕ್ಷೆ ಮುಗಿದ ಒಂದು ತಿಂಗಳೊಳಗೇ ಫಲಿತಾಂಶ ಪ್ರಕಟಿಸಬೇಕು.

7) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರಿ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕು. ವಿದ್ಯಾರ್ಥಿನಿಯರಿಗೆ ಹೆಚ್ಚು ಉಚಿತ ಹಾಸ್ಟೆಲುಗಳನ್ನು ಪ್ರಾರಂಭಿಸಬೇಕು.

8) ಪಠ್ಯ ಪುಸ್ತಕಗಳನ್ನು ಸಮಯಕ್ಕೆ ಸರಿಯಾಗಿ ಸರ್ಕಾರದವರೇ ಮುದ್ರಿಸಿ ಒದಗಿಸಬೇಕು.

9) ಅಧ್ಯಾಪಕರುಗಳ ಕೊರತೆಯನ್ನು ನೀಗಿಸಬೇಕು. ಒಂದು ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 30ಕ್ಕೆ ಮೀರಿರಬಾರದು.

10) ಆದಾಯ ಸರ್ಟಿಫಿಕೇಟುಗಳನ್ನು ನೀಡುವ ಕ್ರಮವನ್ನು ಸರಳೀಕರಿಸಬೇಕು. ಆದಾಯದ ಮಿತಿಯನ್ನು ರೂ. 3,600-00 ಗಳಿಂದ ರೂ. 10,000-00ಗಳಿಗೆ ಏರಿಸಬೇಕು. ಜಾತಿ ಸರ್ಟಿಫಿಕೇಟ್‌ಗಳನ್ನು ಪ್ರತಿ ವರ್ಷ ನೀಡುವ ಅನವಶ್ಯಕ ಕ್ರಮ ರದ್ದುಗೊಳಿಸಬೇಕು.

ಪ್ರಜಾಪ್ರಭುತ್ವ ಬೇಡಿಕೆಗಳು

1) ರಾಜ್ಯದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳನ್ನು ತಪ್ಪದೆ ರಚಿಸಬೇಕು. ನೇರ ಚುನಾವಣೆ ನಡೆಸಬೇಕು.

2) ವಿಶ್ವವಿದ್ಯಾನಿಲಯಗಳ ಸೆನೆಟ್, ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ನೀಡಬೇಕು.

3) ಎಲ್ಲಾ ವಿಶ್ವವಿದ್ಯಾನಿಲಯ ಯೂನಿವರ್ಸಿಟಿ ಸ್ಟೂಡೆಂಟ್ ಕೌನ್ಸಿಲ್‌ಗಳಿಗೆ ನೇರ ಚುನಾವಣೆ ನಡೆಸಬೇಕು.

ಖಂಡನಾ ನಿರ್ಣಯ

1) ಬಾಂಬೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ವಿರೋಧಿ ಕಾಯಿದೆಯನ್ನು ಸಮ್ಮೇಳನವು ಉಗ್ರವಾಗಿ ಖಂಡಿಸಿತು.

2) ಪತ್ರಿಕಾಸ್ವಾತಂತ್ರ್ಯದ ಮೇಲೆ ಸತತವಾಗಿ ನಡೆಯುತ್ತಿರುವ ದಾಳಿಯನ್ನು ಸಮ್ಮೇಳನವು ಖಂಡಿಸಿತು.

○

ಮಹಿಳೆಯರಿಂದ ಘೇರಾವೋ

ತಾರೀಖು 5-1-1981 ರಂದು ತುಮಕೂರು ಜಿಲ್ಲೆಯ ಕುಣಿಗಲ್‌ನ ಪುರಸಭೆಯಲ್ಲಿ ಮಾಹೆಯಾನ ಮೀಟಿಂಗ್ ಮಾಡುತ್ತಿದ್ದಾಗ, ವಾಸಕ್ಕೆ ಸ್ವಂತ ಮನೆ ಇಲ್ಲದವರು ವಸತಿ ಹೀನರ ಸಂಘದ ವತಿಯಿಂದ ತಾಲ್ಲೂಕ್ ಕಛೇರಿಯ ಮುಂದೆ ತಾರೀಖು 24-11-80ರಿಂದ ಮಹಿಳೆಯರು ಸರದಿ ಸತ್ಯಾಗ್ರಹ ಪ್ರಾರಂಭಿಸಿ ನಂತರ ತಾರೀಖು 4-12-80 ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಿದ್ದರೂ ಸಹ ಈ ತಹಲ್‌ವರೆವಿಗೂ, ಪುರಸಭೆಯವರಾಗಲೀ ಅಥವಾ ಸರ್ಕಾರದವರಾಗಲೀ ಈ ಬಡಜನತೆಯ ಕಷ್ಟವನ್ನು ಬಗೆಹರಿಸದೆ ಇದ್ದಾಗ ಇವರ ಗಮನ ಸೆಳೆಯಲು 5-1-81ರಂದು ಪುರಸಭೆಯ ಮೀಟಿಂಗ್ ನಡೆಯುತ್ತಿದ್ದಾಗ ವಸತಿ ಹೀನರ ಸಂಘದ ಮುಖಂಡರುಗಳಾದ ಕಾಂ. ಅಂಜಪ್ಪ ಮತ್ತು ಕಾಂ. ರಾಜಮ್ಮನವರು ವಸತಿ ಹೀನರ ಸಂಘದವರಿಂದ ಮೆರವಣಿಗೆ ಏರ್ಪಡಿಸಿ ಕುಣಿಗಲ್ ಟೌನ್ ಪುರಸಭೆಯ ಮುಂದೆ ಹೋಗಿ ಮೀಟಿಂಗ್ ನಿಲ್ಲಿಸಿ, ಸೈಟ್‌ಕೊಡಿ, ಸೈಟ್‌ಕೊಡದ ಸರ್ಕಾರಕ್ಕೆ ಮತ್ತು ಪುರಸಭೆಯ ಆಡಳಿತವರ್ಗಕ್ಕೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗುತ್ತಾ ಅನೇಕ ಮಂದಿ ಮಹಿಳೆಯರು ಮೀಟಿಂಗ್ ಹಾಲಿನೊಳಕ್ಕೆ ನುಗ್ಗಿದರು. ಆಗ ಮೀಟಿಂಗ್ ನಡೆಸಲು ತೊಂದರೆ ಉಂಟಾಗಿ ಮೀಟಿಂಗ್ ಅನ್ನು ಮುಂದೂಡಲಾಯಿತು. ನಂತರ ಪುರಸಭೆಯ ಸದಸ್ಯರುಗಳಿಗೆ ಘೇರಾವೋ ಮಾಡಿದಾಗ ಆ ಕೂಡಲೇ ಪುರಸಭೆಯ ಎಲ್ಲಾ ಸದಸ್ಯರೂ ಸಹ ಸೈಟಿನ ಸಮಸ್ಯೆಯನ್ನು ಬಗೆಹರಿಸಲು ಪುರಸಭೆಯ ವತಿಯಿಂದ ತುಮಕೂರು ಜಿಲ್ಲಾಧಿಕಾರಿಗಳಿಗೆ ಟೆಲಿಗ್ರಾಂ ಕೊಡಲಾಯಿತು. ನಂತರ ಸದಸ್ಯರುಗಳು ಇನ್ನ 2-3 ದಿವಸಗಳಲ್ಲಿ ಸಂಬಂಧಪಟ್ಟ ಮಂತ್ರಿಗಳಲ್ಲಿ ಒಂದು ನಿಯೋಗ ಹೋಗಿ ಬರುತ್ತೇವೆಂದು ತೀರ್ಮಾನಿಸಿರುತ್ತಾರೆ. ಇಂದಿಗೆ 45ನೇ ದಿನದ ಹಂತವನ್ನು ವಸತಿ ಹೀನರ ಸಂಘದ ಹೋರಾಟ ಮುಟ್ಟಿರುತ್ತದೆ. ನಂತರ ಮೆರವಣಿಗೆಯು ತಾಲ್ಲೂಕು ಕಛೇರಿಯ ಮುಂದೆ ಹೋಗಿ ನೆರೆದಿದ್ದ ಸಭೆಯನ್ನು ಉದ್ದೇಶಿಸಿ ಕಾಂ. ಅಂಜಪ್ಪ, ಕಾಂ. ಮಹಮದ್‌ದಸ್ತಗೀರ್‌ರವರು ಮಾತನಾಡಿದ ನಂತರ ಸಭೆ ಮುಕ್ತಾಯವಾಯಿತು.

○

ಡಿ. ವೈ. ಓ. ಕಾರ್ಯಕ್ರಮ

ರಾಜ್ಯದಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನು ನಿರ್ಮಿಸಿ, ನಿರುದ್ಯೋಗಿಗಳಿಗೆ ಭತ್ತೆಕೊಡಬೇಕು ಮತ್ತು ಸ್ಟೈಫೆಂಡರಿ ಪದವೀಧರರಿಗೆ ವೇತನ ಹೆಚ್ಚಿಸುವುದು ಮತ್ತು ಅವರನ್ನು ಖಾಯಂಗೊಳಿಸುವುದು ಮುಂತಾದ ಬೇಡಿಕೆಗಳಿಗಾಗಿ ಸರ್ಕಾರವನ್ನು ಒತ್ತಾಯಿಸಲು ಡಿ.ವೈ.ಓ. ರಾಜ್ಯ ಸಮಿತಿ ಜನವರಿ 15ರಂದು ಕಾರ್ಯಕ್ರಮ ಹಮ್ಮಿಕೊಂಡಿತ್ತು. ರಾಜ್ಯ ಸಮಿತಿಯ ಕರೆಯ ಮೇರೆಗೆ ವಿವಿಧೆಡೆ ಮೆರವಣಿಗೆ ಮತಪ್ರದರ್ಶನ ನಡೆದಿರುವ ವರದಿಗಳು ಬರುತ್ತಿವೆ.

ಬೆಂಗಳೂರು :

ಬೆಂಗಳೂರಿನಲ್ಲಿ ರಾಜ್ಯಸಮಿತಿಯ ಕರೆಯ ಮೇರೆಗೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ತೀರ್ಮಾನವಾಗಿತ್ತು. ಆದರೆ ನಗರದ ಪೋಲೀಸ್ ಕಮೀಷನರರು ನಿಷೇಧಾಜ್ಞೆಯ ನೆಪವೊಡ್ಡಿ ಮೆರವಣಿಗೆಗೆ ಅನುಮತಿ ಕೊಡಲಿಲ್ಲ. ಕಾರಣ ಕಾರ್ಯಕ್ರಮವನ್ನು ಮುಂದೂಡಿರುವುದಾಗಿ ಜಿಲ್ಲೆಯ ಸಂಚಾಲಕ ಕಾಂ. ಶಿವರಾಂ ವರದಿ ಮಾಡಿದ್ದಾರೆ.

ಕುಂದಾಪುರ :

ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಡಿ.ವೈ.ಓ. ನೇತೃತ್ವದಲ್ಲಿ ಮೆರವಣಿಗೆ ಸಭೆ ನಡೆದವು. ಸಭೆಯನ್ನು ಉದ್ದೇಶಿಸಿ ಮಲೆನಾಡು ವಿಭಾಗದ ಸಂಚಾಲಕ ಕಾಂ. ಆನಂದ ಭಂಡಾರಿಯವರು, ಕಾರ್ಯದರ್ಶಿ ಮಹಾಬಲ ವಡೇರ ಹೋಬಳಿ ಮುಂತಾದವರು ಮಾತನಾಡಿದರು. ಕೊನೆಯಲ್ಲಿ ಕಾಂ. ಗಣಪ್ ಬಂಗೇರ ಅವರು ಧನ್ಯವಾದ ಅರ್ಪಿಸಿದರು.

ಮಂಗಳೂರು :

ಮಂಗಳೂರಿನಲ್ಲಿ ಸಂಚಾಲಕ ಕಾಂ. ಬಿ. ಉಮಾನಾಥರ ನೇತೃತ್ವದಲ್ಲಿ 25 ಸದಸ್ಯರ ನಿಯೋಗ ಜಿಲ್ಲಾಧಿಕಾರಿಗಳನ್ನು ಕಂಡು ಬೇಡಿಕೆಗಳ ಬಗ್ಗೆ ಚರ್ಚಿಸಲಾಯಿತು. ಹಾಗೂ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು. ಈ ನಿಯೋಗದೊಟ್ಟಿಗೆ ಎಸ್. ಎಫ್. ಐ. ಸಂಗಾತಿಗಳೂ ಪಾಲ್ಗೊಂಡಿದ್ದರು.

○

ಜಾಥಾಕ್ಕೆ ಸ್ವಾಗತ

20-1-81ರಂದು ಬೆಂಗಳೂರು ಜಿಲ್ಲಾ ರೈತಸಂಘದ ಜಿಲ್ಲಾಸಮಿತಿಯು ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಪ್ರಗತಿಪರ ಜನತಂತ್ರ ರಂಗವು ಸಂಘಟಿಸಿರುವ ರೈತಜಾಥಾಕ್ಕೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಬೆಂಗಳೂರು ಜಿಲ್ಲೆಯ ದಕ್ಷಿಣ ತಾಲ್ಲೂಕು ರೈತರ ಜಾಥಾವು ಮೈಸೂರಿನಿಂದ ಬರುವ ಜಾಥಾಕ್ಕೆ ಸೇರಬೇಕಾಗಿ, ಹೊಸಕೋಟೆ ತಾಲ್ಲೂಕಿನಿಂದ ಬರುವ ರೈತರು ಕೋಲಾರದಿಂದ ಬರುವ ಜಾಥಾವನ್ನು ಸೇರಬೇಕಾಗಿ, ದೊಡ್ಡಬಳ್ಳಾಪುರ ಮತ್ತು ಉತ್ತರ ತಾಲ್ಲೂಕಿನವರು ಬಾಗೇಪಲ್ಲಿಯಿಂದ ಬರುವ ಜಾಥಾ ಸೇರಬೇಕೆಂದೂ, ಮಾಗಡಿ ಮತ್ತು ನೆಲಮಂಗಲದ ರೈತರು ಮಾಗಡಿಯಿಂದಲೇ ಮೆರವಣಿಗೆಯಲ್ಲಿ ಬಂದು ನರಗುಂದ ಜಾಥಾವನ್ನು ನೆಲಮಂಗಲದಲ್ಲಿ ಸೇರಬೇಕಾಗಿ ನಿರ್ಣಯಮಾಡಲಾಯಿತು.

ಈ ಐತಿಹಾಸಿಕ ಜಾಥಾದಲ್ಲಿ ಸಮಸ್ತ ರೈತ-ಕಾರ್ಮಿಕರು ಭಾಗವಹಿಸಬೇಕೆಂದು ಬೆಂಗಳೂರು ಜಿಲ್ಲಾ ರೈತಸಂಘದ ಸಹಕಾರ್ಯದರ್ಶಿ ಕಾಂ. ಲಕ್ಕಣ್ಣ ಮನವಿಮಾಡಿಕೊಂಡಿದ್ದಾರೆ.

ಜಾಥಾಕ್ಕೆ ಬೆಂಬಲ

ಜ. 16ರಿಂದ ನರಗುಂದದಿಂದ ಪ್ರಾರಂಭವಾಗಿರುವ ಐತಿಹಾಸಿಕ ರೈತ ಕಾರ್ಮಿಕ ಜಾಥಾವನ್ನು ಡಿ.ವೈ.ಎ. ಸ್ವಾಗತಿಸಿದೆ. ತನ್ನ ಶೋಷಣೆಯ ವಿರುದ್ಧ ರೈತ ಸಿಡಿದು ನಿಂತಿರುವುದಕ್ಕೆ ಈ ಜಾಥಾ ನಿದರ್ಶನವಾಗಿದ್ದು, ಯುವಜನ ಸಂಘಟನೆಯ ಸಂಘಟಕರು ಮತ್ತು ಸದಸ್ಯರು ಜಾಥಾದಲ್ಲಿ ಭಾಗವಹಿಸಬೇಕೆಂದು ಕಾಂ. ಶ್ರೀರಾಂ ರೆಡ್ಡಿ ವಿನಂತಿಸಿದ್ದಾರೆ.

ಜಾಥಾ ಸ್ವಾಗತಕ್ಕೆ ಸಿದ್ಧತೆ

ನರಗುಂದದಿಂದ ಪ್ರಾರಂಭವಾಗಿ ಫೆ. 5ರಂದು ರಾಜಧಾನಿಗೆ ತಲುಪಲಿರುವ ರೈತಜಾಥಾಕ್ಕೆ ಅಲ್ಲಲ್ಲಿ ಸ್ವಾಗತಿಸಲು ಸಿದ್ಧತೆ ನಡೆಯುತ್ತಿವೆ. ಇದಕ್ಕೆ ಪೂರಕವಾಗಿ ದಿನಾಂಕ 12-1-81ರಂದು ತುಮಕೂರಿನಲ್ಲಿ ಸಭೆ ಸೇರಲಾಗಿತ್ತು. ಮಾಜೀ ಕಂದಾಯ ಮಂತ್ರಿ ಶ್ರೀ ಚಿಕ್ಕ ಮಾಸ್ತಿಗೌಡರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಗೆ ಸಿ.ಪಿ.ಐ., ಸಿ.ಪಿ.ಐ.(ಎಂ). ಕಾಂಗ್ರೆಸ್ (ಯು) ಪ್ರತಿನಿಧಿಗಳು ಆಗಮಿಸಿದ್ದರು.

ಹಿರಿಯೂರಿನಿಂದ ಹೊರಟು ಜನವರಿ 30ರಂದು- ತಾವರೆಕೆರೆ ತಲುಪಲಿರುವ ಜಾಥಾವನ್ನು ಸ್ವಾಗತಿಸಿ, ಅವರಿಗೆ ಊಟ, ತಿಂಡಿ ವ್ಯವಸ್ಥೆ ಮಾಡಲು, ಅಗತ್ಯವಿರುವ ದವಸ ಧಾನ್ಯ ಮತ್ತಿತರ ಸಾಮಗ್ರಿಗಳನ್ನು ಸಂಗ್ರಹಿಸಲೂ ತೀರ್ಮಾನಿಸಲಾಯಿತು. ಇದಕ್ಕೆ ಪೂರಕವಾಗಿ ಜಿಲ್ಲೆಯಾದ್ಯಂತ ಪ್ರಚಾರ ಸಭೆಗಳನ್ನು ಈಗಿನಿಂದಲೇ ಪ್ರಾರಂಭಿಸಿ ರೈತಕಾರ್ಮಿಕರನ್ನು ತುಮಕೂರು ಮತ್ತಿತರ ಕಡೆಗಳಲ್ಲಿ ಅಣಿನೆರೆಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಈ ಸಭೆಗೆ ಸಿ.ಪಿ.ಐ.(ಎಂ)ನ ಕಾಂ. ಕೆ. ಆರ್. ನಾಯಕ್, ಎಚ್.ಸಿ. ಚೆನ್ನಪ್ಪ, ಸಿ.ಪಿ.ಐ.ನ ಕಾಂ. ಶಿವಣ್ಣ, ಟಿ.ಆರ್. ರೇವಣ್ಣ. ಕಾಂಗ್ರೆಸ್ (ಯು)ನ ಆರ್. ನಾರಾಯಣ, ಶಾಸಕರಾದ ಲಿಂಗಯ್ಯ ಮತ್ತು ಮಾಜೀ ವಿಧಾನ ಸಭಾ ಸದಸ್ಯ ಬಿ. ಗಂಗಣ್ಣ ಮತ್ತಿತರರು ಭಾಗವಹಿಸಿದ್ದರು.

o

ಭೂನ್ಯಾಯಮಂಡಳಿಯಲ್ಲಿ ಭ್ರಷ್ಟಾಚಾರ

ಬಿಜಾಪುರ ಭೂನ್ಯಾಯ ಮಂಡಳಿಯಲ್ಲಿ ಭ್ರಷ್ಟಾಚಾರ ನಡೆದು ಗೇಣಿದಾರರ ವಿರುದ್ಧ, ಭೂಮಾಲೀಕರ ಪರವಾಗಿ ತೀರ್ಪುಕೊಟ್ಟ ವರದಿಯಾಗಿದೆ. ಗೇಣಿದಾರರು ಎಷ್ಟೋ ವರ್ಷದಿಂದ ಭೂಮಿಗಳನ್ನು ಸಾಗುವಳಿ ಮಾಡುತ್ತಾ ಬಂದಿದ್ದರೂ ತೀರ್ಪುಗಳು ಭೂಮಾಲೀಕರ ಪರವಾಗಿಯೇ ಆಗಿವೆ. ಈ ಬಗ್ಗೆ ಬಿಜಾಪುರ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಭೀಮಸಿ ಕಲಾದಗಿಯವರು ಸಾಕ್ಷ್ಯಾಧಾರಗಳೊಟ್ಟಿಗೆ ಮುಖ್ಯಮಂತ್ರಿಗೆ ಮನವಿ ಕೊಟ್ಟಿದ್ದಾರೆ. ಅಲ್ಲದೇ ಭೂನ್ಯಾಯ ಮಂಡಳಿಗಳನ್ನು ತಕ್ಷಣ ರದ್ದುಮಾಡಿ ಯೋಗ್ಯ ಕ್ರಮಕೈಕೊಂಡು ಹೊಸ ಸಮಿತಿಗಳನ್ನು ನೇಮಿಸುವ ತನಕ ಕೇಸುಗಳನ್ನು ತಹಕೂಪ, (Pending). ಕೇಸುಗಳನ್ನು ಪುನರ್ ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಬಡ ಗೇಣಿದಾರರಿಗೆ ನ್ಯಾಯ ದೊರೆಯದಿದ್ದಲ್ಲಿ ಚಳುವಳಿ ಹೂಡಬೇಕಾದೀತೆಂದು ಎಚ್ಚರಿಸಿದ್ದಾರೆ.

o

ಸಮಾಜ ಘಾತಕರಿಗೆ ರಕ್ಷಣೆ

ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನಲ್ಲಿ ನಾಗೂರ ಗ್ರಾಮದ ಪ್ರಭಾವಿ ವ್ಯಕ್ತಿಯೊಬ್ಬನು ತನ್ನ ಬಾಡಿಗೆ ಗೂಂಡಾಗಳ ನೆರವಿನಿಂದ ಕಳ್ಳತನ, ದರೋಡೆ, ಬಣವಿಸುಡುವುದು ಮುಂತಾದ ಕುಕೃತ್ಯಗಳನ್ನು ನಡೆಸುತ್ತಿದ್ದು ಸಂಬಂಧಪಟ್ಟ ಪೋಲೀಸ ಅಧಿಕಾರಿಗಳಿಗೆ ದೂರುಕೊಟ್ಟಿದ್ದರೂ ಪ್ರಯೋಜನವಾಗಿಲ್ಲ. 21-12-80 ರಂದು ಬಾಗೇವಾಡಿಯ ಪಿ.ಎಸ್.ಐ. ಯವರು ನಾಗೂರು ಗ್ರಾಮಕ್ಕೆ ಭೇಟಿಕೊಟ್ಟಾಗ ನೊಂದ ಜನತೆ ಸಾಕ್ಷ್ಯ ಹೇಳಿದ್ದರೂ ಕ್ರಮಕೈಗೊಂಡಿಲ್ಲ. ಸ್ಥಳೀಯ ಶಾಸಕರೂ ಆರೋಪಿಗೆ ಶಾಮೀಲಾಗಿದ್ದಾರೆಂಬ ಗುಮಾನಿ ಇದೆ.

ತಮ್ಮ ಹಣದ ಪ್ರಭಾವದಿಂದ ಬಡಜನತೆಯನ್ನು ತೊಂದರೆಗೀಡು ಮಾಡುವ ವ್ಯಕ್ತಿಯ ಮೇಲೆ ತಕ್ಷಣ ಕ್ರಮಕೈಗೊಳ್ಳಬೇಕೆಂದು ಬಿಜಾಪುರ ರೈತಸಂಘದ ಅಧ್ಯಕ್ಷ ಕಾಂ. ಭೀಮಸಿ ಕಲಾದಗಿಯವರು ಜಿಲ್ಲೆಯ ಪೋಲೀಸ ಅಧಿಕಾರಿ (ಎಸ್. ಪಿ.) ಯವರಿಗೆ ಒತ್ತಾಯಿಸಿದ್ದಾರೆ.

●

ಯಶಸ್ವೀ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ

ಜನವರಿ 17 ಮತ್ತು 18ರಂದು ದಾವಣಗೆರೆಯಲ್ಲಿ ಕರ್ನಾಟಕದ 33 ಮಿಲ್ಲುಗಳ 768 ಪ್ರತಿನಿಧಿಗಳು ಸಮಾವೇಶಗೊಂಡಿದ್ದ ನಾಲ್ಕನೇ ರಾಜ್ಯಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ ಯಶಸ್ವಿಯಾಗಿ ನೆರವೇರಿತು.

ದಕ್ಷಿಣ ವಲಯ (ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕ) ದಲ್ಲಿ ಕರ್ನಾಟಕದಲ್ಲಿ ಅತ್ಯಂತ ಕಡಿಮೆ ವೇತನ ದೊರೆಯುತ್ತಿದೆ. 1974ರಿಂದ ವಲಯ ಮಟ್ಟದಲ್ಲಿ ಒಂದೇ ರೀತಿಯ ವೇತನವಿರಬೇಕೆಂಬುದರ ಬಗ್ಗೆ ಅನೇಕ ಪ್ರಯತ್ನಗಳು ನಡೆದಿದ್ದರೂ ಫಲಕಾರಿಯಾಗಿಲ್ಲ.

17ರಂದು ಪ್ರಾರಂಭವಾದ ಸಮ್ಮೇಳನ ಈ ಪ್ರಶ್ನೆಯನ್ನು ಕುರಿತು ದೀರ್ಘವಾಗಿ ಚರ್ಚಿಸಿತು. ಸಮ್ಮೇಳನವನ್ನು ಉದ್ದೇಶಿಸಿ ಕಾಂ. ಪಂಪಾಪತಿ, ಕಾಂ. ಎ. ಜೆ. ಕೆ. ನಾಯರ್ ಮತ್ತು ಕಾಂ. ಗಂಗಾಧರ ನಮೋಶಿಯವರು ಮಾತನಾಡಿದರು. ಕಾಂ. ಎಂ. ಸಿ. ನರಸಿಂಹನ್ ಅಧ್ಯಕ್ಷತೆ ವಹಿಸಿದ್ದರು. ಪಕ್ಕದ ತಮಿಳುನಾಡಿನಲ್ಲಿಯ ಕಾರ್ಮಿಕರ ವೇತನಕ್ಕೂ ಇಲ್ಲಿಯದಕ್ಕೂ ರೂ. 200ರಷ್ಟು ವ್ಯತ್ಯಾಸವಿದೆ. ಈ ಕೂಡಲೇ 200ರೂ ವೇತನ ಹೆಚ್ಚಳ ಮತ್ತು ತುಟ್ಟಿಭತ್ಯ ಪಾಯಿಂಟಿಗೆ 40 ಪೈಸೆಯಂತೆ ದೊರೆಯಬೇಕೆಂದು ಆಗ್ರಹಪಡಿಸಲಾಯಿತು. ಡಿಸೆಂಬರ್ 31, 1980ಕ್ಕೆ ರಾಜ್ಯಮಟ್ಟದ ಒಪ್ಪಂದ ಕೊನೆಗೊಂಡಿದೆ. ಹೊಸ ಒಪ್ಪಂದಕ್ಕೆ ಮಾಲೀಕರು ಮುಂದೆ ಬರದೇ ತ್ರಿಪಕ್ಷೀಯ ಸಮಿತಿಯನ್ನು ರಚಿಸಲು ಒತ್ತಾಯಿಸುತ್ತಿದ್ದಾರೆ. ಸಮ್ಮೇಳನ ಈ ಆಡಳಿತ ವರ್ಗದ ನಿಲುವನ್ನು ಖಂಡಿಸಿತು. ಬೇಡಿಕೆಗಳನ್ನು ನವೆಂಬರ್ 80ರಲ್ಲಿಯೇ ಮಂಡಿಸಿದ್ದರೂ ಈವರೆಗೂ ಆಡಳಿತವರ್ಗ ಮಾತುಕತೆಗೆ ಮುಂದಾಗಿಲ್ಲ.

ದೇಶದ ಕಾರ್ಮಿಕವರ್ಗಕ್ಕೆಲ್ಲಿ ಒಪ್ಪಿಗೆಯಾಗುವ ಸಮಗ್ರ ಕೈಗಾರಿಕಾ ಭಾಂದವ್ಯ ಕಾನೂನು ರಚಿಸಲು ಸಮ್ಮೇಳನ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ. ಜೀವವಿಮಾ ಮತ್ತು ಸಾಮಾನ್ಯ ವಿಮಾ ನೌಕರರ ಹೋರಾಟವನ್ನು ಬೆಂಬಲಿಸುವ, ಪ್ರಜಾತಂತ್ರ ವಿರೋಧಿ ಸುಗ್ರೀವಾಜ್ಞೆಗಳನ್ನು ಖಂಡಿಸುವ, ಬೆಲೆ ಸೂಚ್ಯಂಕವನ್ನು ತಿದ್ದುವ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕೃಷಿಕಾರ್ಮಿಕರ ಬೇಡಿಕೆಗಳನ್ನು ಬೆಂಬಲಿಸುವ ಮಹತ್ವದ ನಿರ್ಣಯವನ್ನು ಅಂಗೀಕರಿಸಲಾಯಿತು.

ಬೇಡಿಕೆಗಳನ್ನು ಆಡಳಿತವರ್ಗ ಮನ್ನಿಸದಿದ್ದರೆ ಫೆಬ್ರವರಿ 23 ರಿಂದ 28ರ ವರೆಗೆ ಬೇಡಿಕೆ ವಾರ(Demands Week) ಆಚರಿಸಬೇಕೆಂದೂ, ಮಾರ್ಚ್ 2ರಂದು ಸಾಕೇತಿಕ ಮುಷ್ಕರ ಮತ್ತು ಮಾರ್ಚ್ 16ರಿಂದ ಅನಿರ್ಧಿಷ್ಟ ಅವಧಿಯ ಮುಷ್ಕರ ಪ್ರಾರಂಭಿಸುವ ತೀರ್ಮಾನ ಮಾಡಲಾಯಿತು.

ಹೋರಾಟವನ್ನು ಮುನ್ನಡೆಸಲು ಹೋರಾಟ ಸಮಿತಿಯನ್ನು ರಚಿಸಲಾಗಿದೆ. ಅಧ್ಯಕ್ಷರಾಗಿ ಕಾಂ. ಪಂಪಾಪತಿ, ಉಪಾಧ್ಯಕ್ಷರಾಗಿ ಕಾಂ. ಗಂಗಾಧರ ನಮೋಶಿ ಮತ್ತು ಡಾ॥ ಎಂ.ಡಿ. ನಟರಾಜ್, ಕಾರ್ಯದರ್ಶಿಗಳಾಗಿ ಕಾಂ. ಎ.ಜೆ.ಕೆ. ನಾಯರ್, ಕಾಂ. ಸಿ. ಮುನಿರತ್ನಂ ಆಯ್ಕೆಯಾಗಿದ್ದಾರೆ.

ಸಮ್ಮೇಳನದ ಅಂಗವಾಗಿ ಭಾನುವಾರ (ಜನವರಿ 18) ಕಾರ್ಮಿಕರ ಬೃಹತ್ ಮೆರವಣಿಗೆ ಏರ್ಪಡಿಸಲಾಗಿತ್ತು.

o

ಇಂಡಾಲ್ ಮಾತುಕತೆ ವಿಫಲ

ಬೆಳಗಾವಿಯ ಇಂಡಾಲ್ ಕಾರ್ಖಾನೆಯ ಕಾರ್ಮಿಕರು ಮತ್ತು ಮೇನೇಜ್‌ಮೆಂಟ್ ನಡುವೆ ಮಾತುಕತೆ ನಡೆಯುತ್ತಿದ್ದು 56 ನೇ ಸುತ್ತಿನ ಮಾತುಕತೆ ನಂತರ ವಿಫಲವಾಗಿದೆ. ಡಿಸೆಂಬರ್ 31ರಂದು ನಡೆದ ಮಾತುಕತೆಗಳಲ್ಲಿ ಹೆಚ್ಚಿನ ವಿಷಯಗಳ ಬಗ್ಗೆ ಹೊಂದಾಣಿಕೆ ಉಂಟಾಗಿತ್ತು. ಆದರೆ ಇನ್‌ಸೆಂಟಿವ್ ಬೋನಸ್ ವಿಷಯದಲ್ಲಿ ಕಾರ್ಬನ್ ಪೇಸ್ಟ್, ಬ್ಲಾಕ್ ಪ್ಲಾಟ್ ಹಾಗೂ ಕಾಸ್ಟಿಂಗ್ ಪ್ಲಾಂಟ್ ಕಾರ್ಮಿಕರನ್ನು ಗ್ರೂಪ್ ಒಂದಕ್ಕೆ ಸೇರಿಸುವುದನ್ನು ಅಲ್ಪ ಸಂಖ್ಯಾತ ಪಾಟರೂಂ ವರ್ಕರ್ಸ್ ಯೂನಿಯನ್ ವಿರೋಧಿಸಿದ್ದರಿಂದ ಮಾತುಕತೆ ನಿಲುಗಡೆಯಾಯಿತು. ಈ ಇನ್ಸೆಂಟಿವ್ ವಿಷಯವೊಂದನ್ನು ತಹಕೂಪಿನಲ್ಲಿಟ್ಟು ಉಳಿದ ವಿಷಯಕ್ಕೆ ಒಪ್ಪಂದಕ್ಕೆ ಸಹಿ ಹಾಕಲು ಇಂಡಾಲ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಕಾಂ. ಸ್ಥಳೇಕರ್ ಸೂಚಿಸಿದರೂ, ಪಾಟ್‌ರೂಂ ವರ್ಕರ್ಸ್ ಯೂನಿಯನ್ ಒಪ್ಪಂದದಿಂದ ಮಾತುಕತೆ ವಿಫಲವಾಗಿದೆ.

ರೈತ ಸಂಘದ ವಾರ್ಷಿಕ ಸಮ್ಮೇಳನ

ಕಾಸರಗೋಡು ತಾಲ್ಲೂಕಿನ, ಮಂಜೇಶ್ವರ ರೈತ ಸಂಘದ ವಾರ್ಷಿಕ ಸಮ್ಮೇಳನವು ಜ. 3 ಮತ್ತು 4ರಂದು ಕುಂಬಳೆ ಗ್ರಾಮದಲ್ಲಿ ಜರುಗಿತು. ದಿನಾಂಕ 3ರಂದು ಬೆಳಿಗ್ಗೆ 10-30ಕ್ಕೆ. ಕಾಂ. ಅಡ್ಯಂತಾಯರು ಧ್ವಜಾರೋಹಣ ಮಾಡಿದರು. ಪ್ರತಿನಿಧಿ ಸಮ್ಮೇಳನವು ಕಾಂ. ಎ. ವಿ. ಕುಂಞಂಬು ನಗರದಲ್ಲಿ ನಡೆಯಿತು. ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಬ್ಲಾಕ್ ರೈತ ಸಂಘದ ಅಧ್ಯಕ್ಷರಾದ ಕಾಂ. ಮದನ ಮಾಸ್ತರ್‌ರವರು ವಹಿಸಿದ್ದರು.

ಕಾಂ. ಅಬೂಬಕರ್‌ರವರು ಸಭೆಯಲ್ಲಿ ವರದಿ ಮಂಡಿಸಿದರು. ಚರ್ಚೆ ನಡೆದು ವರದಿ ಮಂಜೂರಾಯಿತು. ಕಾಂ. ರಾಮಚಂದ್ರಗಟ್ಟಿ ಮತ್ತು ಕಾಂ. ಅಬೂಬಕರ್ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾದರು. ಹಾಗೂ 40 ಜನರ ಸಮಿತಿಯನ್ನು ಚುನಾಯಿಸಲಾಯಿತು. ಮರುದಿನ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ, ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೇರಳದ ನೀರಾವರಿ ಮಂತ್ರಿ ಕಾಂ. ಸುಬ್ಬರಾವ್ ಮಾತನಾಡಿದರು.

o

ಬೋನಸ್ಸಿನ ತಪ್ಪು ಲೆಕ್ಕಾಚಾರ

ಕರ್ನಾಟಕದ ಬೀಡಿ ಕೈಗಾರಿಕೆಯ ಮಾಲಕರು ಮತ್ತು ಕಾರ್ಮಿಕರ ನಡುವೆ 1974ರಲ್ಲಿ ಆದ ಒಪ್ಪಂದದ ಮೇರೆಗೆ ಎಲ್ಲಾ ಬೀಡಿ ಕಾರ್ಮಿಕರಿಗೆ ಶೇಕಡಾ 8.33 ಬೋನಸ್ ಕೊಡಬೇಕೆಂದು ತೀರ್ಮಾನವಾಗಿದೆ. ಆದರೆ ಕೋಲಾರದ ಹಲವು ಬೀಡಿ ಉದ್ಯಮದ ಮಾಲೀಕರು 1974ರಿಂದಲೂ ಬೋನಸ್ ಮೊತ್ತ ಲೆಕ್ಕ ಹಾಕುವಾಗ ಹೆರಿಗೆ ಸೌಲಭ್ಯ ಮುಂತಾದ ವಾರ್ಷಿಕ ಸೌಲಭ್ಯಗಳನ್ನು ಸೇರಿಸದೆ ಇರುವುದು ಮತ್ತು 1977ರಿಂದ ರಾಷ್ಟ್ರೀಯ ಮತ್ತು ಇತರ ರಜಾದಿನಗಳ ಸಂಬಳವನ್ನು ಗಣನೆಗೆ ತೆಗೆದುಕೊಳ್ಳದೆ ಕಡಿಮೆ ಬೋನಸ್ಸು ಕೊಡುತ್ತಿರುವುದು ಕೋಲಾರ ಜಿಲ್ಲೆ ಜನರಲ್ ವರ್ಕರ್ಸ್ ಯೂನಿಯನ್ ಗಮನಕ್ಕೆ ಬಂದಿದೆ. ಈ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಅಬ್ದುಲ್ ಮಜೀದ್ ಕೋಲಾರ ಜಿಲ್ಲಾ ಲೇಬರ್ ಆಫೀಸರ್ ಮತ್ತು ಬೋನಸ್ ಇನ್ಸ್‌ಪೆಕ್ಟರ್‌ರವರಿಗೆ ಈ ಬಗ್ಗೆ ಪತ್ರ ಬರೆದಿದ್ದು ಇಂತಹ ಮಾಲಕರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

●

ಭಾರೀ ಸ್ವಾಗತ ಬೆಂಬಲಗಳೊಂದಿಗೆ ಮುನ್ನಡೆಯುತ್ತಿರುವ ಜಾಥಾ

(1ನೇ ಪುಟದಿಂದ)

ರೈತ ಮತ್ತು ಕಾರ್ಮಿಕರನ್ನು ವಿಭಜಿಸಿ ಆಳುವ ನೀತಿಯನ್ನು ಖಂಡಿಸಿದರು. ಕಾಂ. ಎಂ. ಕೆ. ಭಟ್ ಮಾತನಾಡುತ್ತಾ, ನಮ್ಮ ಹೋರಾಟ ಬದಲು ಧೋರಣೆಗಳಿಗಾಗಿ ಮತ್ತು ಬದಲೀ ಶಕ್ತಿಯನ್ನು ಬೆಳೆಸುವತ್ತ ನಡೆದಿದೆ ಎಂದರು. ಕಾಂ. ಬಿ. ವಿ. ಕಕ್ಕಿಲ್ಲಾಯ ಮತ್ತು ಶ್ರೀ ಕೆ. ಎಚ್. ಶ್ರೀನಿವಾಸ್ ಮಾತನಾಡುತ್ತಾ ರೈತ ಕಾರ್ಮಿಕ ಹೋರಾಟ ಸಮಿತಿಯು ಮುಂದಿಟ್ಟಿರುವ ಹನ್ನೆರಡು ಬೇಡಿಕೆಗಳನ್ನು ವಿವರಿಸಿ ರೈತಮುಖಂಡರೆನಿಸಿಕೊಂಡು ದ್ರೋಹಮಾಡಿರುವ ಶ್ರೀ ಎಚ್. ಎಸ್. ರುದ್ರಪ್ಪ ಅವರನ್ನು ಖಂಡಿಸಿದರು. ಜಿ. ಎ. ಹಿರೇಮಠ್ ಮತ್ತಿತರರ ನೇತೃತ್ವದಲ್ಲಿ ಧಾರವಾಡದಿಂದ ಹೊರಟ ಜಾಥಾವೊಂದು ಹುಬ್ಬಳ್ಳಿಯಲ್ಲಿ ನರಗುಂದ ಜಾಥಾವನ್ನು ಸೇರಿತು.

19ರ ಬೆಳಿಗ್ಗೆ ಹುಬ್ಬಳ್ಳಿಯಿಂದ ಹೊರಟ ಜಾಥಾವು ಅಂದು ಸಂಜೆ ತಡಸ ಕ್ರಾಸ್‌ನಲ್ಲಿ ತಂಗಿ, 20ರ ಬೆಳಿಗ್ಗೆ ಮತ್ತೆ ಹೊರಟು ರಾತ್ರಿಗೆ ಹಾವೇರಿಯನ್ನು ತಲುಪಿತು. 20ರಂದು ಹಾವೇರಿಯನ್ನು ಬಿಟ್ಟು ಮುನ್ನಡೆದ ಜಾಥಾವು 22ರಂದು ರಾತ್ರಿಗಾಗುವಾಗ ರಾಣೆಬೆನ್ನೂರನ್ನು ತಲುಪಿದ ವಾರ್ತೆ ಬಂದಿದೆ. ದಾರಿಯುದ್ದಕ್ಕೂ ಆರತಿ, ಡೋಲು ತಮ್ಮಟೆ, ವಾಲಗಗಳಿಂದ ಅದ್ದೂರಿಯ ಸ್ವಾಗತ ನೀಡುತ್ತಿರುವ ಹಳ್ಳಿಯ ರೈತರು, ಕೂಲಿಕಾರರು ಮತ್ತು ಪೇಟೆಯ ಜನತೆ, ಜಾಥಾಕ್ಕೆ ಎಲ್ಲಾ ರೀತಿಯ ಬೆಂಬಲವೀಯುತ್ತಲಿದ್ದಾರೆ. ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ಊಟ, ವಸತಿ ವ್ಯವಸ್ಥೆ ಮಾಡಲು ಮುಂದಾಗಿದ್ದಾರೆ. ದಾರಿಯುದ್ದಕ್ಕೂ ಸಭೆ ನಡೆಸಿಕೊಂಡು ಬರುವ ಜಾಥಾದಲ್ಲಿ ಕಾಂ. ವಿ.ಎನ್. ಹಳಕಟ್ಟಿ, ಕಾಂ. ಕಪ್ಪಣ್ಣವರ್, ಪ್ರಾಂತ ರೈತಸಂಘದ ಖಜಾಂಚಿ ಕಾಂ. ಜಗನ್ನಾಥ, ಕಾಂ. ಹನುಮಂತ ಹಳಕಟ್ಟಿ, ಗಂಗಾಧರ ಪಲ್ಲೇದ, ಕಾಂ. ಶ್ರೀನಿವಾಸಗುಡಿ, ಯುವಕ ರೈತಮುಂದಾಳು ಶ್ರೀ ಯಾದಗಲ್, ನೀಲಕಂಠ ಅಸೂಟಿ, ಶ್ರೀ ಅಗ್ನಿಹೋತ್ರಿ ಮೊದಲಾದವರು ಇದ್ದಾರೆ. ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಹುಬ್ಬಳ್ಳಿತನಕ ಜಾಥಾದೊಂದಿಗೆ ನಡೆದಿದ್ದರು. ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ)ನ ರಾಷ್ಟ್ರೀಯ ಮುಖಂಡರುಗಳೂ ಜಾಥಾದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

●

ಚಿಂತಾಮಣಿಯಲ್ಲಿ ಗೋಲಿಬಾರ್ ನಾಲ್ವರ ಸಾವು

ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಬಸ್‌ದರಗಳ ವಿರುದ್ಧ ಪ್ರತಿಭಟಿಸುವ ಮತ್ತು ಕೋಲಾರದಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಚಳುವಳಿ ಬೆಂಬಲ ಸೂಚಿಸುವ ವಿದ್ಯಾರ್ಥಿಗಳ ಮೇಲೆ ಪೋಲೀಸರ ಗೋಲಿಬಾರ್‌ನಿಂದಾಗಿ ನಾಲ್ವರು ನಿರಪರಾಧಿಗಳು ನಿಧನರಾದ ವಾರ್ತೆ ಬಂದಿದೆ.

ಈ ಅಮಾನುಷ ಕೃತ್ಯವನ್ನು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಡಿ.ವೈ.ಓ.ನ ಕಾಂ. ಶ್ರೀರಾಂರೆಡ್ಡಿ, ಎಸ್..ಎಫ್. ಐ.ನ ಕಾಂ. ಆರಾಧ್ಯ. ಸಿ. ಐ. ಟಿ. ಯು. ವಿನಿಂದ ಕಾಂ. ಅನಂತರಾಂ ಉಗ್ರವಾಗಿ ಖಂಡಿಸಿರುವರಲ್ಲದೇ, ರಾಜ್ಯದ ಸಮಸ್ತ ವಿದ್ಯಾರ್ಥಿ-ಯುವಜನರು ಪ್ರತಿಭಟನೆಗೆ ಮುಂದಾಗಬೇಕೆಂದೂ, ತಕ್ಷಣ ಏರಿಸಿದ ಬಸ್ ದರವನ್ನು ಇಳಿಸಬೇಕೆಂದೂ ಒತ್ತಾಯಿಸಿದ್ದಾರೆ.

●

'ಇಂಟರ್‌ಕಾನ್ ಇಂಜಿನಿಯರಿಂಗ್' ಕಾರ್ಮಿಕರ ಹೋರಾಟ

ಬೆಂಗಳೂರಿನ ಯಶವಂತಪುರದಲ್ಲಿರುವ ಇಂಟರ್‌ಕಾನ್ ಇಂಜಿನಿಯರಿಂಗ್ ಕಾರ್ಖಾನೆಯಲ್ಲಿ ಇತ್ತೀಚೆಗೆ ತಾನೆ ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟನೆಯಾಗಿತ್ತು. ಸಂಘವನ್ನು ಮಾನ್ಯತೆ ಕೊಡದ ಮಾಲೀಕ ಸಂಘಟನೆ ಮುರಿಯಲು ಹವಣಿಸುತ್ತಿದ್ದನು. 12-12-80ರಂದು ಬೆಂಗಳೂರಿನಲ್ಲಿ ನಡೆದ ರೈತರ ಕಾರ್ಮಿಕರ ಜಾಥಾದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಸಕ್ರಿಯ ಕಾರ್ಯಕರ್ತರನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಅಲ್ಲದೇ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟರೆ ಮಾತ್ರ ಉಳಿದವರನ್ನು ಒಳಗೆ ಬಿಡುವ ಕರಾರು ಹಾಕಲಾಗಿತ್ತು. ಈ ಅನ್ಯಾಯವನ್ನು ಪ್ರತಿಭಟಿಸಿ ಯಾರೂ ಕೆಲಸಕ್ಕೆ ಹೋಗದೇ ಹೋರಾಟ ಪ್ರಾರಂಭಿಸಿದ್ದಾರೆ. ಅನೇಕ ಸಲ ನಡೆದ ಕನ್ಸಿಲಿಯೇಷನ್‌ಗೂ ಮಾಲೀಕ ಹಾಜರಾಗಿಲ್ಲ.

ಕಾರ್ಮಿಕರ ಮೂಲಭೂತ ಹಕ್ಕಿಗಾಗಿ ನಡೆದಿರುವ ಹೋರಾಟಕ್ಕೆ ಎಲ್ಲ ಕಾರ್ಮಿಕರೂ ಬೆಂಬಲಿಸಬೇಕೆಂದು ಸಂಘದ ಪರವಾಗಿ ಕಾಂ. ಜಿ. ರಾಮು ವಿನಂತಿಸಿಕೊಂಡಿದ್ದಾರೆ.

●

ಫೆ. 5 ವಿಧಾನಸೌಧ ಚಲೋ ಕಾರ್ಯಕ್ರಮ ಯಶಸ್ವಿಗೊಳಿಸಲು ಶ್ರಮಿಸಲು ಕರೆ

ಬೇರೆಬೇರೆ ಕಡೆಗಳಿಂದ ಬರುತ್ತಿರುವ ರೈತರ ಜಾಥಾಗಳು ಫೆಬ್ರುವರಿ 5ರಂದು ಬೆಳಿಗ್ಗೆ ಬೆಂಗಳೂರು ನಗರವನ್ನು ಪ್ರವೇಶಿಸಲಿವೆ. ಅಂದು ಭಾರಿ ಪ್ರಮಾಣದಲ್ಲಿ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನತೆ, ಬುದ್ಧಿಜೀವಿಗಳು, ಮಹಿಳೆಯರೂ ಸೇರಿದಂತೆ ಎಲ್ಲಾ ವಿಭಾಗಗಳ ಜನತೆಯಿಂದ ಸಂಭ್ರಮದ ಸ್ವಾಗತ ದೊರೆಯಲಿದೆ. ಬೆಳಿಗ್ಗೆ 11ಕ್ಕಾಗುವಾಗ ಬೆಂಗಳೂರು ನಗರ ಸುಭಾಷ್‌ನಗರ ಬಸ್ ನಿಲ್ದಾಣ ಮೈದಾನದ ಕಾಂಗ್ರೆಸ್ (ಯು) ಕಛೇರಿ ಆವರಣದಲ್ಲಿ ಎಲ್ಲರೂ ಸೇರಿ, ಬೃಹತ್ ಮೆರವಣಿಗೆ, ವಿಧಾನಸೌಧ ಚಲೋ ಕಾರ್ಯಕ್ರಮವಿದೆ.

ರೈತರ ಜಾಥಾಗಳಲ್ಲಿ ಅಲ್ಲಲ್ಲಿ ಹೆಚ್ಚು ಮಂದಿ ಸೇರಿಕೊಂಡು ಬೆಂಗಳೂರು ತನಕ ನಡೆದುಕೊಂಡೇ ಬರುವಂತೆಯೂ, ಫೆಬ್ರುವರಿ 5 ರಂದು ಭಾರೀ ಪ್ರಮಾಣದಲ್ಲಿ ರೈತ ಕೃಷಿಕೂಲಿಗಾರರು ಬೆಂಗಳೂರಿಗೆ ಬಂದು ಬೆಳಿಗ್ಗೆ ಮೆರವಣಿಗೆ, ಮತಪ್ರದರ್ಶನದಲ್ಲಿ ಸೇರುವಂತೆಯೂ ಸಂಪೂರ್ಣ ಶಕ್ತಿಯನ್ನು ಉಪಯೋಗಿಸಿ ಶ್ರಮಿಸುವಂತೆ ಸಿ.ಪಿ.ಐ.(ಎಂ) ರಾಜ್ಯಸಮಿತಿ ತನ್ನೆಲ್ಲಾ ಸಾಮೂಹಿಕ ಸಂಘಟನೆಗಳು, ಪಕ್ಷದ ಘಟಕಗಳಿಗೆ ಕರೆ ಈಯುತ್ತದೆ. ರೈತಸಂಘವೂ ಪ್ರತ್ಯೇಕವಾಗಿ ಕರೆ ಈಯುತ್ತದೆ.

ಎಂ. ಕೆ. ಭಟ್

ನರರಾಕ್ಷಸರ ಗುಂಡೇಟಿಗೆ ಮೂವರ ಬಲಿ

(1ನೇ ಪುಟದಿಂದ)

ಶಸ್ತ್ರಾಸ್ತ್ರಗಳಿಂದ ಸಜ್ಜಿತರಾಗಿ ಅಮಾಯಕ ಜನರ ಮೇಲೆ ದಾಳಿ ಮಾಡಲಾಗಿದೆ. ಕಾರ್ಮಿಕರ ಹೋರಾಟವನ್ನು ದಬ್ಬಾಳಿಕೆಯಿಂದ ಹತ್ತಿಕ್ಕಲು ಪ್ರಯತ್ನಿಸುತ್ತಿರುವುದು ಹುಚ್ಚುತನವಷ್ಟೇ.

ಪೋಲೀಸ ಗೋಲಿಬಾರನ್ನು ಕಾರ್ಮಿಕ ಮುಖಂಡರು, ರಾಜಕೀಯ ಮುಖಂಡರು ಉಗ್ರವಾಗಿ ಖಂಡಿಸಿ, ನ್ಯಾಯಾಂಗ ತನಿಖೆಗೆ ಆಗ್ರಹಪಡಿಸಿದ್ದಾರೆ. ಹಿಂದೆಂದೂ ನಡೆಯದ ರೀತಿಯಲ್ಲಿ ಬಂದ್‌ಗೆ ಸಹಕರಿಸಿದ ನಾಗರಿಕರಿಗೆ, ಕಾರ್ಮಿಕ ಬಾಂಧವರಿಗೆ ಕೃತಜ್ಞತೆ ಸೂಚಿಸಿದ್ದಾರೆ. ಸಮಾಜಘಾತುಕರನ್ನು ಬಂಧಿಸುವ ನೆಪದಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರನ್ನು ಟ್ರೇಡ್‌ಯೂನಿಯನ್ ಕಾರ್ಯಕರ್ತರನ್ನು ಬಂಧಿಸಿದ್ದನ್ನು ಖಂಡಿಸಿದ್ದಾರೆ. (ಯಶವಂತಪುರ ಮತ್ತಿತರ ಕಡೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ.ಪಿ.ಐ.. ಕಾಂಗ್ರೆಸ್(ಯು)ಗಳಿಗೆ ಸೇರಿದ ಕಾರ್ಯಕರ್ತರನ್ನು ಬಂಧಿಸಲಾಗಿತ್ತು) ಅವರನ್ನೆಲ್ಲ ತಕ್ಷಣ ಬಿಡುಗಡೆಮಾಡಬೇಕೆಂದೂ ಒತ್ತಾಯಿಸಿದ್ದಾರೆ. ಅಲ್ಲದೇ ಜನವರಿ 29ರಂದು ಪೋಲೀಸ್ ಹತ್ಯಾಕಾಂಡವನ್ನು (ಚಿಂತಾಮಣಿಯಲ್ಲಿ ನಡೆದ ಗೋಲಿಬಾರ್‌ನಲ್ಲಿ 4 ಜನ ನಿರಪರಾಧಿಗಳು ನಿಧನರಾಗಿದ್ದಾರೆ) ಪ್ರತಿಭಟಿಸಿ ರಾಜ್ಯಾದ್ಯಂತ ಪ್ರತಿಭಟನಾ ಬಹಿಷ್ಕರ, ಮೆರವಣಿಗೆ ನಡೆಸಲು ಸೌಹಾರ್ಧತಾ ಸಮಿತಿ ತೀರ್ಮಾನಿಸಿದೆ. ದಿನಾಂಕ 22ರಂದು ಬೆಂಗಳೂರಿನಲ್ಲಿ ಕಾರ್ಮಿಕ ಮುಖಂಡರು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯಗಳನ್ನು ಪ್ರಕಟಿಸಲಾಯಿತು. ಕೇಂದ್ರ ಟ್ರೇಡ್ ಯೂನಿಯನ್‌ಗಳ ಮುಖಂಡರು ಪ್ರಧಾನಿಯನ್ನು ಭೇಟಿಯಾಗಿ ಮುಷ್ಕರ ಕೊನೆಗೊಳಿಸಲು ಯತ್ನಿಸಬೇಕೆಂದು ಅವರನ್ನು ವಿನಂತಿಸಿಕೊಳ್ಳಲಾಗಿದೆ. ಅಲ್ಲದೇ ಸೌಹಾರ್ಧತಾ ಸಮಿತಿಯ ಸಂಚಾಲಕರು ಮುಖ್ಯಮಂತ್ರಿಯನ್ನು ಭೇಟಿಮಾಡಲು ತೀರ್ಮಾನಿಸಲಾಗಿದೆ.

○

ಗಮನಿಸಿ

ಉರ್ದೂ ಭಾಷೆಯನ್ನಾಡುವ ದೇಶದ ಅಸಂಖ್ಯಾತ ಅಲ್ಪಸಂಖ್ಯಾತರನ್ನು ತಲುಪಲು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವಾರಪತ್ರಿಕೆಯೊಂದನ್ನು ಹೊರತರಲು ಅನೇಕ ದಿನಗಳಿಂದ ಪ್ರಯತ್ನಿಸುತ್ತಿತ್ತು. ಈಗ ಪ್ರಯತ್ನ ಕೈಗೂಡಿದ್ದು ಜನವರಿ 1-1981ರಂದು 'ಲೋಕಲಹರ್'ನ ಉರ್ದೂ ಆವೃತ್ತಿ ಹೊರಬಂದಿದೆ. 12 ಪೇಜುಗಳನ್ನೊಳಗೊಂಡ ಈ ಸಾಪ್ತಾಹಿಕಕ್ಕೆ ಅತ್ಯಂತ ಸ್ಫೂರ್ತಿದಾಯಕ ಸ್ವಾಗತ ಬಂದಿದ್ದು ರಾಜ್ಯದಲ್ಲೂ ಮುಸ್ಲಿಂ ಬಾಂಧವರಲ್ಲಿ 'ಲೋಕಲಹರ್' (ಉರ್ದೂ ಆವೃತ್ತಿ)ನ್ನು ಪ್ರಚುರಪಡಿಸುವುದು ಅವಶ್ಯವಿದೆ. ಕಾರಣ ಈ ಬಗ್ಗೆ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿ ಕೋರಿಕೆ.

To
The Circulation Manager
LOK LAHAR (URDU)
No. 4, Ashoka Road
New Delhi-110001.

ಕಾಂ. ಎಸ್. ವೆಂಕಟರಾಂ ನಿಧನ

ಸಮಾಜವಾದಿ ಚಿಂತಕರಾಗಿದ್ದ ಮತ್ತು ಖ್ಯಾತ ಕಾರ್ಮಿಕ ಧುರೀಣರಾಗಿದ್ದ ಕಾಂ. ಎಸ್. ವೆಂಕಟರಾಂರು ನಿಧನರಾಗಿದ್ದು, ಕಾರ್ಮಿಕ ಚಳುವಳಿಗೆ, ಎಡಪಂಥೀಯ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಕಾಂ. ವೆಂಕಟ್ರಾಂರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ.ಐ.ಟಿ.ಯು., ಎಸ್.ಎಫ್.ಐ., ಡಿ.ವೈ.ಓ.ಗಳು ಸಂತಾಪ ಸೂಚಿಸಿದೆ.

ಕಾಂ. ಪವಾರ್ ಇನ್ನಿಲ್ಲ

ಕಮ್ಯುನಿಸ್ಟ್ ಚಳುವಳಿಯ ಪ್ರಾರಂಭದಿಂದಲೇ ಒಟ್ಟಿಗಿದ್ದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಸದಸ್ಯನಾಗಿದ್ದು, ಕಾರ್ಮಿಕ ಮುಂದಾಳುವಾಗಿ ಕಾರ್ಮಿಕರ ಚಳುವಳಿಯ ಮುಂಚೂಣಿಯಲ್ಲಿದ್ದ ಕಾಂ. ಜಿ. ವಿ. ಪವಾರ್ ಅವರು ತಾ. 19ರಂದು ರಾತ್ರಿ ನಿಧನರಾದರು. ದಾಂಡೇಲಿಯ ಕಾರ್ಮಿಕರ ಮೆಚ್ಚಿನ ಮುಖಂಡ, ಉತ್ತರ ಕನ್ನಡ ಜಿಲ್ಲೆಯಲ್ಲೆಲ್ಲಾ ಚಿರಪರಿಚಿತ. ಸಿ.ಐ.ಟಿ.ಯು. ರಾಜ್ಯಸಮಿತಿ ಸದಸ್ಯ ಕಾಂ. ಜಿ. ವಿ. ಪವಾರ್ ಅವರ ನಿಧನದಿಂದಲಾಗಿ ಕಾರ್ಮಿಕ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಕಾಂ. ಪವಾರ್ ಅವರ ನಿಧನದ ಬಗ್ಗೆ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಸೆಕ್ರೆಟಾರಿಯೆಟ್ ಪರವಾಗಿ ಎಂ. ಕೆ. ಭಟ್, ಸಿ.ಐ.ಟಿ.ಯು. ರಾಜ್ಯಸಮಿತಿಯ ಪರವಾಗಿ ಸೂರ್ಯನಾರಾಯಣರಾವ್, ಪ್ರಾಂತ ರೈತಸಂಘದ ಪರವಾಗಿ ಮುಗವಾಳಪ್ಪ, ಎಸ್.ಎಫ್.ಐ. ಪರವಾಗಿ ಶಾಂತರೇಣುಕಾರಾಧ್ಯ, ಡಿ.ವೈ.ಓ. ಪರವಾಗಿ ಶ್ರೀರಾಮರೆಡ್ಡಿ ಮೊದಲಾದವರು ಸಂತಾಪ ಸೂಚನೆ ಕಳುಹಿಸಿದ್ದಾರೆ. ಕಾಂ. ಪವಾರ್ ಅವರ ನಿಧನದ ಬಗ್ಗೆ ಐಕ್ಯರಂಗವು ತನ್ನ ಶೋಕ ವ್ಯಕ್ತಪಡಿಸುತ್ತದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT